ಸಂಪುಟ 01 | ಸಂಚಿಕೆ 193 | ಮಂಗಳವಾರ 09 ಜೂನ್ 2026 | ಪುಟ 4 | ಬೆಲೆ-2 ರೂ.

ಇರ್ಫಾನ್ ಕೆ
ಸಂಪಾದಕರು

M A ವಹಾಬ್
ಪ್ರಧಾನ ಸಂಪಾದಕರು

# ನೈಜ್ಯ ದೆಸೆ

NAIJYA DESE

ಸತ್ಯದ ದಿಕ್ಕು TRUE PATH

ಕನ್ನಡ ದಿನ ಪತ್ರಿಕೆ

ಸಿಂಧನೂರು, ಮಸ್ಕಿ
ಮಾನ್ವಿ, ಅಂಗಸೂರು,
ರಾಯಚೂರ,ದೇವದುರ್ಗ
ಬಳ್ಳಾರಿ, ಕೊಪ್ಪಳ
ಯಾದಗಿರಿ, ಕಲಬುರ್ಗಿ,
ಬೀದರ, ವಿಜಯಪುರ.
ಗದಗ, ವಿಜಯನಗರ.
ಏಕಕಾಲಕ್ಕೆ ಪ್ರಕಟಣೆ

REGIONAL KANNADA DAILY MORNING

RNI code: KNKAN/25/A3581 ಮೋ: 9902277588, 9880707587, 9008787586 naijyadese@gmail.com

## ಈ ದಿನದ ವಿಶೇಷ

**1) ಬಿರ್ಸಾ ಮುಂಡಾ ಪುಣ್ಯ ಸ್ಮರಣೆ**

ಭಗವಾನ್ ಬಿರ್ಸಾ ಮುಂಡಾ ಅವರು ಭಾರತದ ಸ್ವಾತಂತ್ರ್ಯ ಹೋರಾಟಗಾರ ಹಾಗೂ ಆದಿವಾಸಿಗಳ ಹಕ್ಕುಗಳಿಗಾಗಿ ಹೋರಾಡಿದ ಧೀಮಂತ ನಾಯಕ. ಬ್ರಿಟಿಷರ ಮತ್ತು ಕ್ರಿಶ್ಚಿಯನ್ ಮಿಷನರಿಗಳ ದಬ್ಬಾಳಿಕೆಯ ವಿರುದ್ಧ ಬುಡಕಟ್ಟು ಜನಾಂಗವನ್ನು ಸಂಘಟಿಸಿ, "ಉಲ್ಗುಲನ್" (ಮಹಾ ದಂಗೆ) ಚಳುವಳಿಯನ್ನು ಮುನ್ನಡೆಸಿದರು. ಕೇವಲ 25 ವರ್ಷಗಳ ಚಿಕ್ಕ ವಯಸ್ಸಿನಲ್ಲಿ, ಜೂನ್ 9, 1900ರಂದು ರಾಂಚಿ ಜೈಲಿನಲ್ಲಿ ಇವರು ಹುತಾತ್ಮರಾದರು.

**2) ವಿಶ್ವ ಮಾನ್ಯತೆ ದಿನ**

ವಿಶ್ವ ಮಾನ್ಯತೆ ದಿನವನ್ನು (ಘಂಡಿಟಜ ಂಛಿಛಿಡಿಜಜುಣಚಿ- ಣುಂಟಿ ಆಚಿಥಿ - ಘಂಆ) ಪ್ರತಿ ವರ್ಷ ಜೂನ್ 9 ರಂದು ಜಾಗತಿಕವಾಗಿ ಆಚರಿಸಲಾಗುತ್ತದೆ. ವ್ಯಾಪಾರ, ಆರ್ಥಿಕತೆ ಮತ್ತು ದೈನಂದಿನ ಜೀವನದಲ್ಲಿ ಪ್ರಮಾಣೀಕರಣ ಹಾಗೂ ಮಾನ್ಯತೆಯ ಮಹತ್ವವನ್ನು ಎತ್ತಿಹಿಡಿಯಲು ಇದನ್ನು ಅಂತರರಾಷ್ಟ್ರೀಯ ಮಟ್ಟದಲ್ಲಿ ಸ್ಥಾಪಿಸಲಾಗಿದೆ.

**3) ರಾಷ್ಟ್ರೀಯ ಸ್ಟ್ರಾಬೆರಿ ರೋಬಾರ್ಬ್ ಪೈ ದಿನ** (National Strawberry Rhubarb Pie Day): ಬೇಸಿಗೆಯ ಋತುವಿನಲ್ಲಿ ಜನಪ್ರಿಯವಾಗಿರುವ ಈ ವಿಶೇಷ ಸಿಹಿತಿಂಡಿಯನ್ನು ಸವಿಯುವ ಮೂಲಕ ಜನರು ಸಂಭ್ರಮಿಸುತ್ತಾರೆ.

## ಸುಭಾಷಿತ

ಸಾಹಿತ್ಯದ ಕೆಲಸವೆಂದರೆ ಮನುಷ್ಯನ ಅಂತರಾಳಕ್ಕೆ ಪ್ರವೇಶ ದೊರಕಿಸಿಕೊಡುವುದು. ಪ್ರೀತಿ, ಅನುಕಂಪ, ಕರುಣೆಯನ್ನು ಹುಟ್ಟಿಸುವುದು.

-ಎಸ್.ಎಲ್.ಭೈರಪ್ಪ

# ಕಾವೇರಲಿದೆ ಪರಿಷತ್ ಚುನಾವಣೆ

## ಕಾಂಗ್ರೆಸ್, ಜೆಡಿಎಸ್ ನಡುವೆ ತೀವ್ರ ಪೈಪೋಟಿ




**ನೈಜ್ಯ ದೆಸೆ ನ್ಯೂಸ್**

**ಬೆಂಗಳೂರು: ರಾಜ್ಯ ವಿಧಾನ ಸಭೆಯಿಂದ ವಿಧಾನ ಪರಿಷತ್‌ನ 7 ಸದಸ್ಯ ಸ್ಥಾನಗಳಿಗೆ ಮತ ದಾನ ನಡೆಯುವುದು ಅನಿವಾರ್ಯವಾಗಲಿದೆ. ಐವರು ಅಭ್ಯರ್ಥಿಗಳನ್ನು ಕಾಂಗ್ರೆಸ್ ಸ್ಪರ್ಧೆಗಿಳಿಸಿರುವ ಹಿನ್ನೆಲೆಯಲ್ಲಿ ಜೆಡಿಎಸ್ ಮತ್ತು ಕಾಂಗ್ರೆಸ್ ಅಭ್ಯರ್ಥಿ ನಡುವೆ ತೀವ್ರ ಪೈಪೋಟಿ ಏರ್ಪಡುವ ಸಾಧ್ಯತೆಗಳು ಸ್ಪಷ್ಟವಾಗಿವೆ.**

ಜೂ.18ರಂದು ಮೇಲನೆ ಚುನಾವಣೆಗೆ ಮತದಾನ ನಡೆಯುವುದು ಖಾತ್ರಿಯಾಗಿದೆ. ಆದರೆ ರಾಜ್ಯಸಭೆ ಚುನಾವಣೆಗೆ ಹೆಚ್ಚುವರಿ ಅಭ್ಯರ್ಥಿಗಳು ಇಲ್ಲದಿರುವ ಹಿನ್ನೆಲೆಯಲ್ಲಿ ಅವಿರೋಧ ಆಯ್ಕೆಯಾಗುತ್ತಿದೆ. ವಿಧಾನಪ-ರಿಷತ್ ಚುನಾವಣೆಯಲ್ಲಿ ಗೌಪ್ಯ ಮತದಾನ ನಡೆಯುವುದರಿಂದ ಅಡ್ಡ ಮತದಾನ ನಡೆಯುವ ಸಾಧ್ಯತೆಯನ್ನು ತಳ್ಳಿ ಹಾಕುವಂತಿಲ್ಲ.

ಜೆಡಿಎಸ್ ಮತ್ತು ಕಾಂಗ್ರೆಸ್ ನಡುವೆ ಒಂದು ಸ್ಥಾನದ ಗೆಲುವಿಗಾಗಿ ತೀವ್ರ ಪೈಪೋಟಿ ಉಂಟಾಗುವುದರಿಂದ ಶಾಸಕರಿಗೆ ಭಾರೀ ಬೇಡಿಕೆ ಉಂಟಾಗಲಿದೆ. ಒಂದು ವೇಳೆ ರಾಜ್ಯಸಭೆ ಚುನಾವಣೆಯಂತೆ ಕಾಂಗ್ರೆಸ್ 5ನೇ ಅಭ್ಯರ್ಥಿಯನ್ನು ಕಣಕ್ಕಿಳಿಸದಿದ್ದರೆ ಮೂರು ಪಕ್ಷಗಳ ಅಭ್ಯರ್ಥಿಗಳು ಅವಿರೋಧವಾಗಿ ಆಯ್ಕೆಯಾಗುತ್ತಿದ್ದರು.

ಮತದಾನ ಅನಿವಾರ್ಯವಾಗಿರುವುದ-ರಿಂದ ಮೂರೂ ಪಕ್ಷಗಳಲ್ಲಿ ತಮ ತಮ ಅಭ್ಯರ್ಥಿಗಳ ಗೆಲುವಿಗೆ ಚುನಾವಣಾ ತಂತ್ರಗಾ-ರಿಕೆಗಳು ರೂಪಿಸಲಾಗುತ್ತದೆ. ಜೊತೆಗೆ ತಮ ಶಾಸಕರ ಮತಗಳು ಬೇರೆ ಪಕ್ಷದ ಅಭ್ಯರ್ಥಿಗಳಿಗೆ ದೊರೆಯಂತೆ ಮಾಡಲು ವಿಪ್ ನೀಡುವುದು ಸೇರಿದಂತೆ ಹಲವು ಕ್ರಮಗಳನ್ನು ಕೈಗೊಳ್ಳುವ ಸಾಧ್ಯತೆಗಳಿವೆ. ವಿಧಾನಸಭೆಯಲ್ಲಿ ಕಾಂಗ್ರೆಸ್ ಹೊಂದಿರುವ ಶಾಸಕರ ಸಂಖ್ಯಾಬಲದ ಆಧಾರದ ಮೇಲೆ 4 ಸ್ಥಾನ ಹಾಗೂ ಬಿಜೆಪಿ ಹೊಂದಿರುವ ಶಾಸಕರ ಸಂಖ್ಯಾ ಬಲದ ಆಧಾರದ ಮೇಲೆ 2 ಸ್ಥಾನಗಳನ್ನು ಸುಲಭವಾಗಿ ಗೆಲ್ಲಬಹುದಾಗಿದೆ.

ಆದರೆ ಜೆಡಿಎಸ್ 18 ಶಾಸಕರನ್ನು ಹೊಂದಿರುವುದರಿಂದ ಸುಲಭವಾಗಿ ಗೆಲ್ಲಲು ಸಾಧ್ಯವಾಗುವುದಿಲ್ಲ. ಬಿಜೆಪಿಯ ಹೆಚ್ಚುವರಿ ಮತಗಳನ್ನು ಪಡೆದರೂ ಗೆಲುವಿನ ದಡ ಸೇರುವುದು ಕಷ್ಟವಾಗಲಿದೆ. ಆದರೆ ಕಾಂಗ್ರೆಸ್ ಕೂಡ 5ನೇ ಅಭ್ಯರ್ಥಿಯನ್ನು ಸ್ಪರ್ಧೆಗಿಳಿಸಿದೆ. ಈ ಅಭ್ಯರ್ಥಿಯ ಗೆಲುವು ಸುಲಭವಲ್ಲ. ಹೀಗಾಗಿ ಕಾಂಗ್ರೆಸ್ ಮತ್ತು ಜೆಡಿಎಸ್ ಅಭ್ಯರ್ಥಿಗಳ ನಡುವೆ ತೀವ್ರ ಹಣಾಹಣಿ ಏರ್ಪಡುವ ಸಾಧ್ಯತೆಗಳು ಗೋಚರಿಸುತ್ತಿವೆ.

ನಾಳೆ ನಾಮಪತ್ರಗಳ ಪರಿಶೀಲನೆ ನಡೆಯಲಿದ್ದು , ಜೂ.11ರಂದು ನಾಮಪತ್ರ ವಾಪಸ್ ಪಡೆಯಲು ಕಡೆಯ ದಿನವಾಗಿದ್ದು ಅಂದು ಅಂತಿಮ ಕಣದಲ್ಲಿ ಉಳಿಯುವ ಅಭ್ಯರ್ಥಿಗಳನ್ನು ಪ್ರಕಟಿಸಲಾಗುತ್ತದೆ. ಕಾಂಗ್ರೆಸ್‌ನ 5ನೇ ಅಭ್ಯರ್ಥಿ ಉಮೇದುವಾ-ರಿಕೆ ಹಿಂಪಡೆಯದಿದ್ದರೆ ಜೂ.18ರಂದು ಮತದಾನ ನಡೆದು ಅಂದು ಸಂಜೆ ಲಿತಾಂಶ ಪ್ರಕಟವಾಗಲಿದೆ.

ಕಾಂಗ್ರೆಸ್ ಅಭ್ಯರ್ಥಿಗಳಾಗಿ ತಿಪ್ಪಣ್ಣಪ್ಪ ಕನಕನೂರು, ಪಿ.ವಿ.ಮೋಹನ್, ಕೆಪಿಸಿಸಿ ಅಧ್ಯಕ್ಷ ಬಿ.ಕೆ.ಹರಿಪ್ರಸಾದ್, ಶಿವಣ್ಣ.ಬಿ.ಎಸ್ ಹಾಗೂ ವಿನಯ್ ಕಾರ್ತಿಕ್ ಉಮೇದುವಾರಿಕೆ ಸಲ್ಲಿಸಿದ್ದಾರೆ. ಬಿಜೆಪಿ ಅಭ್ಯರ್ಥಿಗಳಾದ ಲಿಂಗರಾಜ್ ಪಾಟೀಲ್, ರಘು ಕೌಟಿಲ್ಯ ಹಾಗೂ ಜೆಡಿಎಸ್ ಅಭ್ಯರ್ಥಿ ಗೋವಿಂದ ರಾಜ್ ಅವರು ಚುನಾವಣಾ ಸ್ಪರ್ಧೆಗಿಳಿದಿದ್ದಾರೆ. ನಾಮಪತ್ರ ಸಲ್ಲಿಕೆಗೆ ಕಡೆಯ ದಿನವಾದ ಇಂದು ಕಾಂಗ್ರೆಸ್ ಅಭ್ಯರ್ಥಿ ವಿನಯ್ ಕಾರ್ತಿಕ್, ಬಿಜೆಪಿ ಅಭ್ಯರ್ಥಿಗಳಾದ ಲಿಂಗರಾಜ್ ಪಾಟೀಲ್, ರಘು ಕೌಟಿಲ್ಯ ಹಾಗೂ ಜೆಡಿಎಸ್ ಅಭ್ಯರ್ಥಿ ಗೋವಿಂದ ರಾಜ್ ಅವರು ಇಂದು ತಮ ಉಮೇದುವಾರಿಕೆಯನ್ನು ಸಲ್ಲಿಸಿದರು.

## ವಾರದೊಳಗೆ ವೈದ್ಯರ ನೇಮಕಾತಿಗೆ ಸಚಿವ ಖಾದರ್ ಸೂಚನೆ

**ನೈಜ್ಯ ದೆಸೆ ನ್ಯೂಸ್**

**ಮಂಗಳೂರು: ರಾಜ್ಯದ ಸರ್ಕಾರಿ ಆಸ್ಪತ್ರೆಗಳಲ್ಲಿ ಖಾಲಿ ಇರುವ ವೈದ್ಯರ ಹುದ್ದೆಗಳಿಗೆ ವಾರದೊಳಗೆ ನೇಮಕಾತಿ ಮಾಡಿಕೊಳ್ಳುವಂತೆ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವ ಯು.ಟಿ. ಖಾದರ್ ತಿಳಿಸಿದ್ದಾರೆ.**



ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ರಾಜ್ಯದ ಸರ್ಕಾರಿ ಆಸ್ಪತ್ರೆಗಳಲ್ಲಿ ಸುಮಾರು 900ರಷ್ಟು ವೈದ್ಯರ ಹುದ್ದೆಗಳು ಖಾಲಿ ಇದ್ದು, ವಾರದೊಳಗೆ ಭರ್ತಿಗೆ ಕ್ರಮ ಕೈಗೊಳ್ಳುವಂತೆ ಜಿಲ್ಲಾ ಆರೋಗ್ಯ ಇಲಾಖೆ ಅಧಿಕಾ-ರಿಗಳಿಗೆ ಸೂಚಿಸಲಾಗಿದೆ ಎಂದು ಹೇಳಿದ್ದಾರೆ. ಎಂಬಿಬಿಎಸ್ ಪೂರ್ಣಗೊಳಿಸಿದವರು ಕರ್ತವ್ಯ ನಿರ್ವಹಿಸಲು ಬಂದಲ್ಲಿ ಅವರಿಗೆ ಆಯಾ ಜಿಲ್ಲೆಯ ಆರೋಗ್ಯ ಅಧಿಕಾರಿಗಳು ವಾರದೊಳಗೆ ತಾತ್ಕಾಲಿಕ ನೇಮಕಾತಿ ಆದೇಶ ಪತ್ರ ನೀಡಬೇಕು. ಇಲ್ಲದಿದ್ದಲ್ಲಿ ಅಂತಹ ಅಧಿಕಾರಿಗಳನ್ನು ಅಮಾನತು ಮಾಡಲಾಗುವುದು. ನೇಮಕವಾದವರಿಗೆ ಮಾಸಿಕ 60,000 ರೂ. ವೇತನ ನೀಡಲಾಗುವುದು ಎಂದು ಹೇಳಿದ್ದಾರೆ. ಸರ್ಕಾರಿ ಆಸ್ಪತ್ರೆಗಳಲ್ಲಿ ವೈದ್ಯರ ಕೊರತೆ ಇರುವುದು ಗಮನದಲ್ಲಿದೆ. ಕಾಯಂ ನೇಮಕಾತಿ ಆಗುವವರೆಗೆ ಗುತ್ತಿಗೆ ಆಧಾರದಲ್ಲಿ ವೈದ್ಯರ ನೇಮಕ ಮಾಡಿಕೊಳ್ಳಲಿದ್ದು, ಎಂದು ಹಂತವಾಗಿ ವಿವಿಧ ಸಮಸ್ಯೆ ಬಗೆಹರಿಸಲಾಗುವುದು ಎಂದು ತಿಳಿಸಿದ್ದಾರೆ.

## ಎಫ್‌ಐಡಿ ರದ್ದುಗೊಳಿಸಿ, ಲಭ್ಯತೆಗೆ ತಕ್ಕಂತೆ ಯೂರಿಯಾ ನೀಡುವಂತೆ ರೈತರ ಆಗ್ರಹ

**ನೈಜ್ಯ ದೆಸೆ ನ್ಯೂಸ್**



**ಬಳ್ಳಾರಿ / ಕಂಪ್ಲಿ : ಎಫ್‌ಐಡಿ ಮೂಲಕ ಯೂರಿಯಾ ರಸಗೊಬ್ಬರವನ್ನು ಮಿತಿಯಲ್ಲಿ ನೀಡುವುದನ್ನು ರದ್ದುಗೊಳಿಸಿ, ಲಭ್ಯತೆಗೆ ಅನುಗುಣವಾಗಿ ರೈತರಿಗೆ ಯೂರಿಯಾ ನೀಡಬೇಕು. ಮತ್ತು ಜಿಲ್ಲೆಯಲ್ಲಿ ಡಿಸೇಲ್ ಮತ್ತು ಪೆಟ್ರೋಲ್ ಅನ್ನು ಬ್ಯಾರಲ್, ಕ್ಯಾನ್‌ಗಳಿಗೆ ಹಾಕುವುದನ್ನು ತಡೆಗಟ್ಟಬೇಕೆಂದು ಆಗ್ರಹಿಸಿ, ಕರ್ನಾಟಕ ರೈತ ಸಂಘ ಹಾಗೂ ಹಸಿರು ಸೇನೆ ನೇತೃತ್ವದಲ್ಲಿ ರೈತರು ಪಟ್ಟಣದ ತಹಶೀಲ್ದಾರ್ ಕಛೇರಿಯಲ್ಲಿ ತಹಶೀಲ್ದಾರ್ ಜೂಗಲ್ ಮಂಜುನಾಯಕಗೆ ಸೋಮವಾರ ಮನವಿ ಪತ್ರ ಸಲ್ಲಿಸಿದರು.**

ನಂತರ ನಗರ ಘಟಕಾಧ್ಯಕ್ಷ ಎನ್. ತಿಮ್ಮಪ್ಪ ಮಾತನಾಡಿ, ಪ್ರಸಕ್ತ ಮುಂಗಾರು ಹಂಗಾಮಿನ ಹಿನ್ನಲೆ ಸಾಕಷ್ಟು ರೈತರು ಈಗಾಗಲೇ ಹೊಲಗದ್ದೆಗಳಲ್ಲಿ ಹದಗೊಳಿಸುವ ಜೊತೆಗೆ ಕೃಷಿ ಚಟುವಟಿಕೆಗಳಲ್ಲಿ ತೊಡಗಿಕೊಂಡಿದ್ದಾರೆ. ಈಗಾಗಲೇ ರಸಗೊಬ್ಬರ ಬೆಲೆ ಗಣನೀಯವಾಗಿ ಏರಿಕೆ ಕಂಡಿದೆ. ಇತ್ತೀಚೆಗೆ ಸರ್ಕಾರ ಯೂ-ರಿಯವನ್ನು ಎಫ್‌ಐಡಿ ಮೂಲಕ ರೈತರು ತೆಗೆದುಕೊಳ್ಳುವಂತೆ ಆದೇಶಿಸಲಾಗಿದೆ ಇದ-ರಿಮದ ಬೆಳೆ ಬೆಳೆಯುವ ರೈತರಿಗೆ ತುಂಬಾ ತೊಂದರೆ ಉಂಟಾಗುತ್ತದೆ. ಮತ್ತು ಕೆಲ ಬೆಳೆಗಳ ಇಳುವರಿಯೂ ಸಹ ಕುಂಠಿತವಾಗುತ್ತದೆ. ಇನ್ನೂ ಕೆಲ ಬೆಳೆಗಳು ಯೂರಿಯಾ ಕೊರತೆಗೆ ನಸಿಸಲಿವೆ ಆದ್ದರಿಂದ ಸರ್ಕಾರ ರೈತರ ಬಗ್ಗೆ ಹೆಚ್ಚಿನ ಗಮನ ಹರಿಸಿ, ರೈತರಿಗೆ ಲಭ್ಯತೆಗೆ ಆಧಾರದ ಮೇಲೆ ಯೂರಿಯಾ ನೀಡಲು ಮುಂದಾಗಬೇಕು.

ಇತ್ತೀಚಿನ ಮಧ್ಯಪ್ರಾಚ್ಯದ ಯುದ್ಧದಿಂದಾಗಿ ಪೆಟ್ರೋಲ್, ಡಿಸೇಲ್ ಗಗನಕ್ಕೇರಿದೆ. ಇದರಿಂದ ರೈತರಿಗೆ ಸಮಸ್ಯೆ ತಂದೊಡ್ಡಿದೆ. ಬಳ್ಳಾರಿ ಜಿಲ್ಲೆಯಲ್ಲಿ ಡಿಸೇಲ್, ಪೆಟ್ರೋಲ್ ಅನ್ನು ಬ್ಯಾರಲ್, ಕ್ಯಾನ್ ಮೂಲಕ ಕೊಂಡೊಯ್ಯುತ್ತಿರುವುದ-ರಿಂದ ಸಾಕಷ್ಟು ಸಮಸ್ಯೆಯಾಗಿದೆ. ಆದ-್ದರಿಂದ ಬ್ಯಾರಲ್, ಕ್ಯಾನ್‌ಗಳಲ್ಲಿ ಡಿಸೇಲ್, ಪೆಟ್ರೋಲ್ ತೆಗೆದುಕೊಂಡು ಹೋಗುವುದಕ್ಕೆ ಕಡಿವಾಣ ಹಾಕಬೇಕೆಂದು ಒತ್ತಾಯಿಸಿದರು.

ಈ ಸಂದರ್ಭದಲ್ಲಿ ಜಿಲ್ಲಾ ಕಾರ್ಯದರ್ಶಿ ಕೊಟ್ಟೂರು ರಮೇಶ, ನಗರ ಘಟಕದ ಗೌರವಾಧ್ಯಕ್ಷ ಎ.ರಂಗಪ್ಪ, ಖಜಾಂಜಿ ಟಿ.ಗಂಗಣ್ಣ, ಪ್ರಧಾನ ಕಾರ್ಯದರ್ಶಿ ಬಿ.ಮಲ್ಲಿಕಾರ್ಜುನ, ಮುಖಂಡರಾದ ವಿ.ಟಿ.ನಾಗರಾಜ, ಅಂಜಿನ್ವ, ವಿರುಪಣ್ಣ, ನಾಗರಾಜ, ನಾಗಪ್ಪ ಸೇರಿದಂತೆ ರೈತರಿದ್ದರು.

## ಮುಷ್ಟಿಗೆರಿ ಗ್ರಾಮದ ಸರ್ಕಾರಿ ವೈದ್ಯ: ಡಾ. ವೈ.ಜೆ. ಮನಿಯಾರ್‌ಗೆ ರಾಜ್ಯ ಮಟ್ಟದ ವೈದ್ಯಕೀಯ ಕ್ಷೇತ್ರದಲ್ಲಿ'ಉತ್ತಮ ಸೇವಾ ರತ್ನ' ಪ್ರಶಸ್ತಿ

**ನೈಜ್ಯ ದೆಸೆ ನ್ಯೂಸ್**

**ಬಾಗಲಕೋಟೆ ಜಿಲ್ಲೆಯ ಬಾದಾಮಿ ತಾಲೂಕಿನ ಮುಷ್ಟಿ ಗೆರಿ ಗ್ರಾಮದ ವೈದ್ಯ*ಡಾಕ್ಟರ್ ವೈ ಜೆ ಮನಿಯಾರ್ ಅವರಿಗೆ: ಶ್ರೀ ಸುಜ್ಞಾನ ವಿದ್ಯಾಪೀಠ ಮತ್ತು ಸಾಂಸ್ಕೃತಿಕ ರಂಗಕಲಾವಿದರ ಸಾಧಕರ ಶ್ರೀ ಮಾತಾ ಪ್ರಕಾಶನ (ರಿ), ಕರ್ನಾಟಕ ಸಂಸ್ಥೆಯ ವತಿಯಿಂದ ಏರ್ಪಡಿಸಲಾಗಿದ್ದ 'ಭರವಸೆಯ ಬೆಳಕು ಪ್ರಶಸ್ತಿ ಹಾಗೂ ಶಿಕ್ಷಕರ ಸಾಹಿತ್ಯ ಸಮ್ಮೇಳನ ಮತ್ತು ರಾಜ್ಯ ಮಟ್ಟದ ಪ್ರಶಸ್ತಿ ಪ್ರದಾನ ಸಮಾರಂಭ'ಬೆಂಗಳೂರದಲಿ ಬಾದಾಮಿ ತಾಲೂಕಿನ ಮುಷ್ಟಿಗೆರಿ ಗ್ರಾಮದ ವೈದ್ಯರಾದ**



ಡಾ. ವೈ.ಜೆ. ಮನಿಯಾರ್ ಅವರಿಗೆ 'ರಾಜ್ಯ ಮಟ್ಟದ ಉತ್ತಮ ಶೈಕ್ಷಣಿಕ ಸೇವಾ ರತ್ನ ಪ್ರಶಸ್ತಿ' ನೀಡಿ ಗೌರವಿಸಲಾಯಿತು.

ಜೂನ್ 7, 2026ರ ಶನಿವಾರ ನಡೆದ ಈ ಕಾರ್ಯಕ್ರಮದಲ್ಲಿ ಕನ್ನಡ, ಉರ್ದು, ಹಿಂದಿ, ಇಂಗ್ಲಿಷ್, ಸಂಸ್ಕೃತ ಸೇರಿದಂತೆ ಶಿಕ್ಷಣ, ಸಾಹಿತ್ಯ, ಸಾಮಾಜಿ-ಕ ಸೇವೆ, ಸಂಸ್ಕೃತಿ, ಕ್ರೀಡೆ, ಯೋಗ, ಪತ್ರಿಕೋದ್ಯಮ, ಚಿತ್ರಕಲೆ, ಚಲನಚಿತ್ರ ಕ್ಷೇತ್ರಗಳಲ್ಲಿ ಡಾ. ವೈ ಜೆ ಮನಿಯಾರ್ ಅವರು ಸಲ್ಲಿಸಿರುವ ಸೇವೆಯನ್ನು ಗುರುತಿಸಿ ಈ ಪ್ರಶಸ್ತಿ ಪ್ರದಾನ ಮಾಡಲಾಯಿತು.

ವೈದ್ಯಕೀಯ ಕ್ಷೇತ್ರದಲ್ಲಿ ನಿರಂತರವಾಗಿ ಶ್ರಮಿಸುತ್ತಿರುವ ಡಾ. ವೈ ಜೆ ಮನಿಯಾರ್ ಅವರ ಈ ಸಾಧನೆಗೆ ಜಿಲ್ಲೆಯ ಶಿಕ್ಷಕರು, ಸಾಹಿತ್ಯಾಸಕ್ತರು ಹಾಗೂ ಸಾರ್ವಜನಿಕರಿಂದ ಅಭಿನಂದನೆಗಳ ಮಹಾಪೂರ ಹರಿದುಬಂದಿದೆ

## ಇನ್ನು ಮೂರು ದಿನ ರಾಜ್ಯದಲ್ಲಿ ಭಾರೀ ಮಳೆ ಸಾಧ್ಯತೆ

**ನೈಜ್ಯ ದೆಸೆ ನ್ಯೂಸ್**

**ಬೆಂಗಳೂರು: ನೈರುತ್ಯ ಮುಂಗಾರು ಚೇತ-ರಿಸಿಕೊಂಡಿದ್ದು, ರಾಜ್ಯಾದ್ಯಂತ ವ್ಯಾಪಕ ಮಳೆಯಾಗುತ್ತಿದೆ. ಕರಾವಳಿ ಭಾಗದ ಜಿಲ್ಲೆಗಳಲ್ಲಿ ಭಾರೀ ಮಳೆಯಾಗುತ್ತಿದೆ. ಇನ್ನು ಮೂರು ದಿನಗಳ ಕಾಲ ರಾಜ್ಯದಲ್ಲಿ ಭಾರೀ ಮಳೆಯಾಗುವ ಮುನ್ಸೂಚನೆಯನ್ನು ಹವಾಮಾನ ಇಲಾಖೆ ನೀಡಿದೆ.**




ದಕ್ಷಿಣ ಕನ್ನಡ, ಉಡುಪಿ ಜಿಲ್ಲೆಗಳಲ್ಲಿ ಭಾರೀ ಮಳೆಯಾಗಲಿದ್ದು, ರೆಡ್ ಅಲರ್ಟ್ ಘೋಷಿಸಲಾಗಿದೆ. ಕೊಡಗು, ಚಿಕ್ಕಮಗಳೂರು, ಶಿವಮೊಗ್ಗ, ಉತ್ತರಕನ್ನಡ, ಹಾವೇರಿ, ಧಾರವಾಡ, ರಾಯಚೂರು ಜಿಲ್ಲೆಗಳಲ್ಲೂ ಭಾರೀ ಮಳೆಯಾಗುವ ಸಾಧ್ಯತೆಗಳಿದ್ದು, ಆರೆಂಜ್ ಅಲರ್ಟ್ ನೀಡಲಾಗಿದೆ. ಬೀದರ್, ಕಲಬುರಗಿ, ಯಾದಗಿರಿ, ವಿಜಯಪುರ, ಬಾಗಲಕೋಟೆ, ಬೆಳಗಾವಿ, ಗದಗ, ಕೊಪ್ಪಳ, ಹಾಸನ, ತುಮಕೂರು, ಚಿಕ್ಕಬಳ್ಳಾಪುರ ಜಿಲ್ಲೆಗಳಲ್ಲೂ ಭಾರೀ ಮಳೆಯಾಗುವ ಮುನ್ಸೂಚನೆಗಳಿದ್ದು, ಯಲ್ಲೋ ಅಲರ್ಟ್ ನೀಡಲಾಗಿದೆ. ಕೋಲಾರ, ಬೆಂಗಳೂರು ಗ್ರಾಮಾಂತರ, ಬೆಂಗಳೂರು ನಗರ, ಬೆಂಗಳೂರು ದಕ್ಷಿಣ, ಮಂಡ್ಯ, ಮೈಸೂರು, ಚಾಮರಾಜನಗರ, ಚಿತ್ರದುರ್ಗ, ದಾವಣಗೆರೆ, ವಿಜಯನಗರ , ಬಳ್ಳಾರಿ ಜಿಲ್ಲೆಗಳಲ್ಲಿ ಸಾಧಾರಣ ಮಳೆಯಾಗಲಿದೆ.

ರಾಜ್ಯಾದ್ಯಂತ ಮೋಡ ಕವಿದ ವಾತಾವರಣವಿದ್ದು, ಆಗಾಗ್ಗೆ ಬಲವಾದ ಮೇಲ್ಮೈ ಗಾಳಿ ಬೀಸಲಿದೆ. ಜೊತೆಗೆ ಆಗಾಗ್ಗೆ ಮಳೆಯೂ ಬೀಳಲಿದೆ. ಕರಾವಳಿ, ಮಲೆನಾಡು ಭಾಗದಲ್ಲಿ ಭಾರೀ ಮಳೆಯಾದರೆ ರಾಜ್ಯದ ಒಳನಾಡಿನಲ್ಲಿ ಸಾಧಾರಣ ಮಳೆಯಾಗಲಿದೆ. ಕೆಲವೆಡೆ ಗುಡುಗು, ಮಿಂಚಿನಿಂದ ಕೂಡಿದ ಧಾರಾಕಾರ ಮಳೆಯಾಗುವ ಲಕ್ಷಣಗಳು ಗೋಚರಿಸುತ್ತಿವೆ.

ನಿನ್ನೆಯೂ ಕರಾವಳಿ ಸೇ-ರಿದಂತೆ ರಾಜ್ಯದ ಹಲವು ಜಿಲ್ಲೆಗಳಲ್ಲಿ ವ್ಯಾಪಕ ಪ್ರಮಾಣದ ಮಳೆಯಾಗಿದೆ. ಕುಂದಾಪುರದಲ್ಲಿ 75 ಮಿ.ಮೀನಷ್ಟು ಅತ್ಯ ಕ ಪ್ರಮಾಣದ ಮಳೆಯಾಗಿದೆ. ಯಲ್ಲಾಪುರ 72.2 ಮಿ.ಮೀ, ಸಿರ್ಸಿ 63, ಹೊನ್ನಾವರ 62.5, ಕುಮಟಾ 55.4, ಗೋಕರ್ಣ 54.3, ಕಾರಟಗಿ 82.6, ಕಿತ್ತೂರು 80, ಲೋಕಾಪುರ್ 78, ಹುಕ್ಕೇರಿ 61.1, ತಾವರಗೆರೆ 61 ಮಿ.ಮೀ ಉಳಿದಂತೆ ರಾಜ್ಯದ ಹಲವೆಡೆ ಮಳೆಯಾಗಿದೆ.

## ದಿ. ರಾಜಾ ವಸಂತ ನಾಯಕ ಜನ್ಮದಿನದಂದು ಪರಿಸರ ಜಾಗೃತಿ ಕಾರ್ಯಕ್ರಮ

**ನೈಜ್ಯ ದೆಸೆ ನ್ಯೂಸ್**

**ಮಾನ್ವಿ: ಪಟ್ಟಣದ ಶ್ರೀ ರಂಗನಾಥ ಪ್ರೌಢಶಾಲೆಯ ಆವರಣದಲ್ಲಿ ಆರ್.ವಿ.ಎನ್. ಗ್ರೂಪ್ ವತಿಯಿಂದ ವಿಶ್ವ ಪರಿಸರ ದಿನಾಚರಣೆ ಹಾಗೂ ದಿ. ರಾಜಾ ವಸಂತ ನಾಯಕ ಜನ್ಮದಿನದ ಅಂಗವಾಗಿ ಉಚಿತ ಸಸಿಗಳ ವಿತರಣೆ ಮತ್ತು ಪರಿಸರ ಜಾಗೃತಿ ಕಾರ್ಯಕ್ರಮ ನಡೆಯಿತು. ಕಾರ್ಯಕ್ರಮವನ್ನು ದಿ. ರಾಜಾ ವಸಂತ ನಾಯಕ ಅವರ ಭಾವಚಿತ್ರಕ್ಕೆ ಪುಷ್ಪ ಸಮರ್ಪಿಸುವ ಮೂಲಕ ತಾಲೂಕು ಖಾಸಗಿ ಶಾಲೆಗಳ ಒಕ್ಕೂಟದ ಅಧ್ಯಕ್ಷ ರಾಜಾ ಸುಭಾಷಚಂದ್ರ ನಾಯಕ ಉದ್ಘಾಟಿಸಿ ಮಾತನಾಡಿದರು.**




ಈ ಸಂದರ್ಭದಲ್ಲಿ ಮಾತನಾಡಿದ ಅವರು, ದಿ. ರಾಜಾ ವಸಂತ ನಾಯಕ ತಮ್ಮ ಜೀವನವನ್ನು ಸಮಾಜ ಸೇವೆಗೆ ಸಮರ್ಪಿಸಿಕೊಂಡಿದ್ದರು. ಪ್ರತಿವರ್ಷ ವಿಶ್ವ ಪರಿಸರ ದಿನಾಚರಣೆಯಂದು ಸಾರ್ವಜನಿಕರಿಗೆ ಉಚಿತ ಸಸಿಗಳನ್ನು ವಿತರಿಸುವ ಮೂಲಕ ಹಸಿರಿಕರಣಕ್ಕೆ ಹೆಚ್ಚಿನ ಆದ್ಯತೆ ನೀಡುತ್ತಿದ್ದರು. ಅವರು ತೋರಿದ ಮಾರ್ಗದಂತೆ ಪರಿಸರ ದಿನಾಚರಣೆಯ ಅಂಗವಾಗಿ ಸಾರ್ವಜನಿಕರು ಹಾಗೂ ವಿದ್ಯಾರ್ಥಿಗಳಿಗೆ ಉಚಿತ ಸಸಿಗಳನ್ನು ವಿತರಿಸಲಾಗುತ್ತಿದ್ದು, ಕುಟುಂಬದ ವತಿಯಿಂದ ರಸ್ತೆ ಬದಿ, ಶಾಲಾ ಆವರಣ ಹಾಗೂ ಸರ್ಕಾರಿ ಸ್ಥಳಗಳಲ್ಲಿ ಸಸಿಗಳನ್ನು ನೆಟ್ಟು ಅವರಿಗೆ ನಿಜವಾದ ಗೌರವ ಸಲ್ಲಿಸಲಾಗುವುದು ಎಂದು ತಿಳಿಸಿದರು.

ಟಿಎಪಿಸಿಎಂಸಿ ಅಧ್ಯಕ್ಷ ತಿಮ್ಮರೆಡ್ಡಿ ಭೋಗವತಿ ಮಾತನಾಡಿ, ದಿ. ರಾಜಾ ವಸಂತ ನಾಯಕ ಪರಿಸರ ಪ್ರೇಮಿಯಾಗಿದ್ದು, ತಮ್ಮ ಜನ್ಮದಿನವನ್ನು ಅದ್ದೂರಿಯಾಗಿ ಆಚರಿಸಿಕೊಳ್ಳುವ ಬದಲು ಸಾವಿರಾರು ಸಸಿಗಳನ್ನು ಸಾರ್ವಜನಿಕರಿಗೆ ವಿತರಿಸುವ ಮೂಲಕ ಅರ್ಥಪೂರ್ಣವಾಗಿ ಆಚ-ರಿಸುತ್ತಿದ್ದರು. ಪರಿಸರ ಸಂರಕ್ಷಣೆ ಕುರಿತು ಜಾಗೃತಿ ಮೂಡಿಸಲು ತಾಲೂಕಿನಾದ್ಯಂತ ಅನೇಕ ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಹಸಿರಿಕರಣಕ್ಕೆ ವಿಶೇಷ ಒತ್ತು ನೀಡಿದ್ದರು ಎಂದು ಸ್ಮರಿಸಿದರು.

ಕಾರ್ಯಕ್ರಮದಲ್ಲಿ ಸಾರ್ವಜನಿಕ-ರಿಗೆ ಸಾವಿರಾರು ಸಸಿಗಳನ್ನು ಉಚಿತವಾಗಿ ವಿತರಿಸಲಾಯಿತು. ಕಾರ್ಯಕ್ರಮದಲ್ಲಿ ಸೈಯಾದ್ ಸಜ್ಜತ್ ಹುಸೇನಿ ಮತವಾಲೆ, ಶಿವರಾಜ ನಾಯಕ, ಹರಿಹರ ಪಾಟೀಲ್, ಮರಿಸ್ವಾಮಿ ರೌಡೂರು, ತನ್ವೀರ್ ಹಾಸನ್, ನೇತಾಜಿ ಶಿಕ್ಷಣ ಸಂಸ್ಥೆಯ ಅಧ್ಯಕ್ಷ ಕೆ.ಇ. ನರಸಿಂಹ, ಸೈಯಾದ್ ಖಾಲೀದ್ ಖಾದ್ರಿ, ನೀಲಪ್ಪ ಜಾನೆಕಲ್, ಚಂದ್ರಶೇಖರ ಕುರ್ಡಿ, ಸುರಾಜ್ ವಕೀಲರು, ಡಾ. ವಸಂತ, ರಾಜಾ ಶಾಮಸುಂದರ ನಾಯಕ, ರಾಜಾ ಇಂದ್ರಜೀತ್ ನಾಯಕ, ಲಕ್ಷ್ಮೀದೇವಿ ನಾಯಕ, ಜಿ. ನಾಗರಾಜ, ಸತ್ತರ ಬಂಗ್ಲೇವಾಲೆ ಸೇರಿದಂತೆ ಹಲವರು ಉಪಸ್ಥಿತರಿದ್ದರು.

## ಸಾಹಿತ್ಯ ಸಿಂಚನ

### ಹೆಣ್ಣೆಂದರೆ

ನನ್ನ ಅವ್ವ,ಅಜ್ಜಿ ಹೇಳುತ್ತಿದ್ದರು
ಮಗಳೇ ಹೆಣ್ಣೆಂದರೆ ಹೀಗಿರಬೇಕು
ಸಹನೆಯ ಕಡಲಾಗಿ ಮಮತೆಯ ಮಡಿಲಾಗಿ
ಧರಣಿ ತೂಕದ ದೇವತೆಯಂತಿರಬೇಕು//

ಮತ್ತೊಬ್ಬರ ಮನೆ ಬೆಳಗುವ ದೀಪವಾಗಬೇಕು
ಅತ್ತೆ ಮಾವ,ಗಂಡನ ಸೇವೆ ಮಾಡುತ್ತಾ
ನೋವು ನಲಿವುಗಳ ಬುತ್ತಿ ಸೊಗಸಾಗಿ ಉಂಡು
ಕಷ್ಟ ಸುಖಗಳ ತವರಿನಲ್ಲಿ ಬಿತ್ತರಿಸದ ಕರುಣಾಮಯಿ
ಆಗಬೇಕು//

ಬಡತನಕ್ಕಾಗಲಿ ಶರೀರದ ಸುಖಕ್ಕಾಗಲಿ
ಪರಪುರುಷನನ್ನು ಮೋಹಿಸದ ಸಾಧ್ವಿಯಾಗಬೇಕು
ಸಂಸಾರ ಸರಿಯಾಗಿ ದೂಗಿಸುವ ಚತುರೆಯಾಗಬೇಕು
ಸಂಕಟಗಳ ಓಡಿಸುವ ಶಕ್ತಿಯಾಗಬೇಕು
ಮಗಳೇ ಹೆಣ್ಣೆಂದರೆ ಹೀಗಿರಬೇಕು//

ಕವಿತಾ ಹಿರೇಮಠ ಕವಿತಾಳ

## ಕಾರುಣ್ಯಾಶ್ರಮದ ಸೇವೆ ಪುಸ್ತಕದಲ್ಲಿ ಬರೆಯುವಂತದ್ದಲ್ಲ ಮಸ್ತಕದಲ್ಲಿ ಉಳಿಯುವಂತದ್ದು – ವೀರೇಶ ದೇವರಮನಿ

❏ ನೈಜ್ಯ ದೆಸೆ ನ್ಯೂಸ್

ಸಿಂಧನೂರು – ಸಿಂಧನೂರು ನಗರದ ಒಳಬಳ್ಳಾರಿ ರಸ್ತೆಯಲ್ಲಿರುವ ಕರ್ನಾಟಕ ಸರ್ಕಾರದ ರಾಜ್ಯ ಪ್ರಶಸ್ತಿ ಪ್ರಸ್ತುತ ಸಂಸ್ಥೆಯಾದ ಶ್ರೀ ಮಠ ಸೇವಾ ಟ್ರಸ್ಟ್ (ರಿ)ಹರೇಟನೂರು ಕಾರುಣ್ಯ ನೆಲೆ ವೃದ್ಧಾಶ್ರಮ ಹಾಗೂ ವಯಸ್ಕರ ಬುದ್ಧಿಮಾಂದ್ಯ ಆಶ್ರಮದಲ್ಲಿ ಆರ್. ಜಿ. ಮೆಲೋಡಿಸ್ ಸಿಂಧನೂರು ವತಿಯಿಂದ " ಸಂಗೀತ ಸುಧಾ" ಎನ್ನುವ ವಿಶೇಷ ಕಾರ್ಯಕ್ರಮದಡಿಯಲ್ಲಿ ಖ್ಯಾತ ಗಾಯಕರಾದ ಮಲ್ಲಮ್ಮ ಪೋತ್ನಾಳ ಇವರ ಜನ್ಮ ಸಾರ್ಥಕ ದಿನವನ್ನು ಮಹಾಪ್ರಸಾದ ಸೇವೆ ಹಣ್ಣು ಹಂಪಲುಗಳನ್ನು ಅರ್ಥಪೂರ್ಣವಾಗಿ ಆಚರಿಸಲಾಯಿತು.

ಈ ಕಾರ್ಯಕ್ರಮದಲ್ಲಿ ಖ್ಯಾತ ಗಾಯಕಿ ಮಲ್ಲಮ್ಮ ಅವರನ್ನು ಕಾರುಣ್ಯ ಆಶ್ರಮದ ವತಿಯಿಂದ ಗೌರವಿಸಿ ಸನ್ಮಾನಿಸಿ ಆಶೀರ್ವದಿಸಲಾಯಿತು ಈ ಕಾರ್ಯಕ್ರಮದಲ್ಲಿ ನೇತೃತ್ವ ವಹಿಸಿದ್ದ ಆರ್. ಜಿ.ಮೆಲೋಡಿಸ್ ನ ವ್ಯವಸ್ಥಾಪಕರಾದ ಗಾಯಕ ವೀರೇಶ ದೇವರಮನಿ ಮಾತನಾಡಿ ಆತ್ಮೀಯ ಸಹೋದ–ರಿಯಾದ ಮಲ್ಲಮ್ಮ ಅವರ ಜನ್ಮ ಸಾರ್ಥಕ



ದಿನವು ಇಂತಹ ಕರುಣೆಯ ಕುಟುಂಬದಲ್ಲಿ ನೆರವೇರಿ ಇಲ್ಲಿರುವ ಎಲ್ಲಾ ಶರಣ–ರ ಆಶೀರ್ವಾದ ಸ್ವೀಕರಿಸಿದ ಈ ಕಾರ್ಯಕ್ರಮ ನಮ್ಮೆಲ್ಲರಿಗೂ ಸಂತೋಷವನ್ನುಂಟು ಮಾಡಿದೆ. ಈ ನಮ್ಮ ಕಾರುಣ್ಯಾಶ್ರಮದ ಸೇವೆ ಪುಸ್ತಕದಲ್ಲಿ ಬರೆಯುವಂತದ್ದಲ್ಲ ಮಸ್ತಕದಲ್ಲಿ ಉಳಿಯುವಂತದ್ದು. ಸುಮಾರು ವರ್ಷಗಳ ಹಿಂದೆ ಹುಟ್ಟಿಕೊಂಡಿರುವ ಈ ಕಾರುಣ್ಯ ಆಶ್ರಮವು ಅದೆಷ್ಟೋ ಟೀಕೆ ಟಿಪ್ಪಣಿ ಅವಮಾನ ಅಪಪ್ರಚಾರ ಹಿತ ಶತ್ರುಗಳನ್ನು ಎದುರಿಸುತ್ತಾ ಸ್ವಚ್ಛ ಸುಂದರ ಮನಸ್ಸಿನಿಂದ ಮಾಡುವ ಸೇವೆಗೆ ಯಾರೇ ಏನು ಮಾಡಿದರು ಸಹ ಏನನ್ನು ಮಾಡಲಾಗುವುದಿಲ್ಲ.

ಕಲಾವಿದರನ್ನು ಹೆಚ್ಚು ಗೌರವದಿಂದ ಕಾಣುತ್ತಿರುವ ಈ ಕಾರುಣ್ಯ ಆಶ್ರಮ ನಮ್ಮ ನಾಡಲ್ಲದೆ ವಿವಿಧ ರಾಜ್ಯದ ಕಲಾವಿದರ ಪ್ರೀತಿಗೆ ಪಾತ್ರವಾಗಿದೆ. ಕೇವಲ ಬಡಜಂಗಮರಾಗಿ ಅ ಹರೇಟನೂರಿನ ಆದಿಶಕ್ತಿ ಶ್ರೀ ಚಾಮುಂಡಿ ಅರ್ಚಕರಾದ ಅಮರಯ್ಯ ಸ್ವಾಮಿಯವರು ಅನಾಥಾಶ್ರಮ ಮಾಡಿದ್ದು ಇತಿಹಾಸವೇ ಸರಿ. ನಾವು ನಮ್ಮ ಜೀವನದಲ್ಲಿ ಅರ್ಚಕರಾದಂತವರು ಇಂತಹ ಸೇವೆ ಮಾಡುತ್ತಿರುವುದು ಆ ದೇವಿಯ ಆಶೀರ್ವಾದದಿಂದ ಇವರಕ್ಕಾಗಿ ನಿಜವಾದ ಅನಾಥರಿಗೆ ಹುಟ್ಟಿಕೊಂಡಿರುವ ಈ ಸಂಸ್ಥೆಗೆ ನಾವೆಲ್ಲರೂ ಬೆನ್ನೆಲುಬಾಗಿರುತ್ತೇವೆ ಎಂದು ಭಾವನಾತ್ಮಕವಾಗಿ ಮಾತನಾಡಿದರು.

ನಂತರ ಆಶ್ರಮದ ಕಾರ್ಯಾಧ್ಯಕ್ಷರಾದ ಡಾ. ಚನ್ನಬಸವ ಸ್ವಾಮಿ ಹಿರೇಮಠ ಮಾತನಾಡಿ ಸಮಾಜದಲ್ಲಿ ಹಲವಾರು ಅನುಭವಗಳನ್ನು ಅನುಭವಿಸುತ್ತಾ ಮಾಡುತ್ತಿರುವ ನಮ್ಮ ಈ ಸೇವೆ ನಮ್ಮ ಅಂತರಾತ್ಮ ಹಾಗೂ ಪರಮಾತ್ಮನಿಗೆ ಗೊತ್ತಿದ್ದರೆ ಸಾಕು ಎನ್ನುವುದು ನಮ್ಮೆಲ್ಲರ ಆಶಯವಾಗಿದೆ ಎಂದು ಮಾತನಾಡಿದರು. ಈ ಕಾರ್ಯಕ್ರಮದಲ್ಲಿ ಕಲಾವಿದರುಗಳಾದ ಮಲ್ಲಮ್ಮ ವಿಶಾಲಾಕ್ಷಿ ವಿಶ್ವನಾಥ ಹಿರೇಮಠ. ಲಕ್ಷ್ಮೀ. ಗಣೇಶ ಗ್ರಾಮ ಲೆಕ್ಕಾಧಿಕಾರಿಗಳು. ಬಸವರಾಜ. ರಾಘವೇಂದ್ರ.ರಂಗನಾಥರಾವ್. ಹಾಗೂ ಆಶ್ರಮದ ಸಿಬ್ಬಂದಿಗಳಾದ ಸುಜಾತ ಮಲದ ಗುಡ್ಡ. ಮರಿಯಪ್ಪ ಜ್ಯೋತಿ. ಹಾಗೂ ಅನೇಕ ಕಲಾವಿದರುಗಳು ಭಾಗವಹಿಸಿದ್ದರು

## ಸತೀಶ ಜಾರಕಿಹೊಳೆ ಅವರನ್ನು ಹೂ ಗುಚ್ಛ ನೀಡಿ ಸನ್ಮಾನ. ಬಂಡಿವಡ್ಡರ.

❏ ನೈಜ್ಯ ದೆಸೆ ನ್ಯೂಸ್

ಗೋಕಾಕ: ನೂತನ ಮುಖ್ಯಮಂತ್ರಿ ಮಾನ್ಯ ಶ್ರೀ ಡಿ. ಕೆ. ಶಿವಕುಮಾರ್ ಸಚಿವ ಸಂಪುಟದಲ್ಲಿ ಲೋಕೋಪಯೋಗಿ ಸಚಿವರಾಗಿ ಪ್ರಮಾಣ



ವಚನ ಸ್ವೀಕರಿಸಿದ ನಂತರ ಮೊದಲ ಭಾರಿಗೆ ಗೋಕಾಕ ನಗರಕ್ಕೆ ಆಗಮಿಸಿದ ಗೃಹ ಕಚೇ–ರಿಯಲ್ಲಿ ಮಾನ್ಯ ಶ್ರೀ ಸತೀಶ್ ಜಾರಕಿಹೊಳಿ ಅವರಿಗೆ ಸತೀಶ್ ಬಂಡಿವಡ್ಡರ ಅವರು ಗೌರವ ಪೂರ್ವಕ ಹೂ ಗುಚ್ಛ ನೀಡಿ ಸನ್ಮಾನಿಸಿ ಅಭಿನಂದಿಸಿದರು.

## ವಿದ್ಯಾರ್ಥಿಗಳ ತಟ್ಟೆಗೆ ಕನ್ನ ಹಾಕುವಂತಹ ನಿಲಯ ಪಾಲಕನನ್ನು ಸೇವೆಯಿಂದ ಕಿತ್ತೊಗೆಯಿರಿ– ಪ್ರಶಾಂತ್. ಪಿ

❏ ನೈಜ್ಯ ದೆಸೆ ನ್ಯೂಸ್

ಮಾನ್ವಿ: ಸಮಾಜ ಕಲ್ಯಾಣ ಇಲಾಖೆಯ ಅಧೀನದಲ್ಲಿರುವ ಮೆಟ್ರಿಕ್ ಪೂರ್ವ ಬಾಲಕರ ವಸತಿ ನಿಲಯದಲ್ಲಿ ವಿದ್ಯಾರ್ಥಿಗಳಿಗೆ ಸರ್ಕಾರ ನಿಗದಿಪಡಿಸಿರುವ ಆಹಾರ ಸಾಮಗ್ರಿಗಳನ್ನು ಸಮರ್ಪಕವಾಗಿ ವಿತರಿಸದೆ ಅಕ್ರಮ ಎಸಗಲಾಗುತ್ತಿದೆ ಎಂದು ಆರೋಪಿಸಿ ಭೀಮಸೇನೆ ಕರ್ನಾಟಕ (ರಿ) ವಿದ್ಯಾರ್ಥಿ ಘಟಕದ ವತಿಯಿಂದ ತಾಲೂಕು ಪಂಚಾಯತ್ ಕಾರ್ಯನಿರ್ವಾಹಕ ಅಧಿಕಾರಿಗಳಿಗೆ ಹಾಗೂ ಸಮಾಜ ಕಲ್ಯಾಣ ಇಲಾಖೆಯ ಅಧಿಕಾರಿಗಳಿಗೆ ಮನವಿ ಸಲ್ಲಿಸಲಾಯಿತು.

ಭೀಮಸೇನೆ ಕರ್ನಾಟಕ ವಿದ್ಯಾರ್ಥಿ ಘಟಕದ ರಾಜ್ಯ ಪ್ರಧಾನ ಕಾರ್ಯದರ್ಶಿ ಪ್ರಶಾಂತ್ ಜಾಗೀರ್ ಪನ್ನೂರು ಅವರ ನೇತೃತ್ವದಲ್ಲಿ ಸಲ್ಲಿಸಲಾದ



ಮನವಿಯಲ್ಲಿ, ವಸತಿ ನಿಲಯದ ನಿಲಯಪಾಲಕ ಚಂದ್ರಶೇಖರ್ ಹೂಗಾರ್ ಅವರು ವಿದ್ಯಾರ್ಥಿಗಳಿಗೆ ಸರ್ಕಾರದ ಅಧಿಕೃತ ಡಯಟ್ ಮೆನು ಪ್ರಕಾರ ಆಹಾರ ಒದಗಿಸುತ್ತಿಲ್ಲ ಎಂದು ಆರೋಪಿಸಲಾಗಿದೆ.

ಮನವಿಯಲ್ಲಿ ಉಲ್ಲೇಖಿಸಿರುವಂತೆ, ವಸತಿ ನಿಲಯದಲ್ಲಿ ಸುಮಾರು 60 ವಿದ್ಯಾರ್ಥಿಗಳು ಇದ್ದರೂ,



ದಾಖಲೆಗಳಲ್ಲಿ 160 ವಿದ್ಯಾರ್ಥಿಗಳ ಹೆಸರನ್ನು ನಮೂದಿಸಿ ಆಹಾರ ಸಾಮಗ್ರಿಗಳ ಬಳಕೆ ತೋ–ರಿಸಲಾಗುತ್ತಿದೆ ಎನ್ನಲಾಗಿದೆ. ಅಕ್ಕಿ, ತರಕಾರಿ, ಹಾಲು ಹಾಗೂ ಇತರೆ ಆಹಾರ ಪದಾರ್ಥಗಳ ಬಳಕೆಯಲ್ಲಿ ಅಕ್ರಮ ನಡೆದಿರುವ ಶಂಕೆ ವ್ಯಕ್ತಪಡಿಸಲಾಗಿದೆ. ಇದಲ್ಲದೆ, ವಿದ್ಯಾರ್ಥಿಗಳ ಹೆಸರಿನಲ್ಲಿ ಸುಳ್ಳು ಹಾಜರಾತಿ ಹಾಗೂ ಹಣಕಾಸು ದಾಖಲೆಗಳನ್ನು (ಏಟಟಆ & ಗಿಂಣಛಿಜಿಡಿ) ಸೃಷ್ಟಿಸಿ ಸರ್ಕಾರದ ಅನುದಾನವನ್ನು ದುರುಪಯೋಗಪಡಿಸಿಕೊಳ್ಳಲಾಗಿದೆ ಎಂಬ ಗಂಭೀರ ಆರೋಪವೂ ಮನವಿಯಲ್ಲಿ ಮಾಡಲಾಗಿದೆ.

ಈ ಹಿನ್ನೆಲೆಯಲ್ಲಿ ವಸತಿ ನಿಲಯದ ಆಡಳಿತದ ವಿರುದ್ಧ ಸಮಗ್ರ ತನಿಖೆ ನಡೆಸಿ, ತಪ್ಪಿತಸ್ಥರ ವಿರುದ್ಧ ಕಾನೂನು ಕ್ರಮ ಕೈಗೊಳ್ಳಬೇಕು ಹಾಗೂ ವಿದ್ಯಾರ್ಥಿಗಳಿಗೆ ನ್ಯಾಯ ಒದಗಿಸಬೇಕು ಎಂದು ಭೀಮಸೇನೆ ಕರ್ನಾಟಕ ವಿದ್ಯಾರ್ಥಿ ಘಟಕ ಆಗ್ರಹಿಸಿದೆ. ಈ ಕುರಿತು ಸಂಬಂಧಿತ ಅಧಿಕಾರಿಗಳು ತನಿಖೆ ನಡೆಸಿ ಸತ್ಯಾಂಶವನ್ನು ಬಹಿರಂಗಪಡಿಸಬೇಕೆಂದು ವಿದ್ಯಾರ್ಥಿ ಸಂಘಟನೆ ಒತ್ತಾಯಿಸಿದೆ. ಈ ಸಂದರ್ಭದಲ್ಲಿ ಸಾಮಾಜಿಕ ಕಾರ್ಯಕರ್ತರಾದಂತಹ ಶಾಂತರಾಜ್ ರವರು ಉಪಸ್ಥಿತರಿದ್ದರುಅರ್ಥಪೂರ್ಣವಾಗಿ ಆಚರಿಸಲಾಯಿತು.

## ಕಾರು ಪಲ್ಟಿ : ಇಬ್ಬರ ಸಾವು

❏ ನೈಜ್ಯ ದೆಸೆ ನ್ಯೂಸ್

ಹಾಸನ : ವೇಗವಾಗಿ ಹೋಗುತ್ತಿದ್ದ ಕಾರು ಚಾಲಕನ ನಿಯಂತ್ರಣ ತಪ್ಪಿ ರಸ್ತೆ ಬದಿಯ ಹಳ್ಳಕ್ಕೆ ಪಲ್ಟಿ ಹೊಡೆದು ಸ್ಥಳದಲ್ಲೇ ಇಬ್ಬರು ಯುವಕರು ಸಾವನ್ನಪ್ಪಿ ಮೂವರು ಗಾಯಗೊಂಡಿರುವ ದಾರುಣ ಘಟನೆ ಅರಸಿಕೆರೆ ತಾಲೂಕಿನ ಜಾವಗಲ್–ಹಳೇಬೀಡು ರಸ್ತೆಯಲ್ಲಿ ನಡೆದಿದೆ.



ಜಿಲಾನಿ (28) ಮತ್ತು ಮೊಸಿನ್ (25) ಮೃತಪಟ್ಟವರು, ಅಪಘಾತದಲ್ಲಿ ಕಾರಿನಲ್ಲಿದ್ದ ಇತರ ಮೂವರಿಗೆ ಗಂಭೀರ ಗಾಯಗಳಾಗಿದ್ದು, ಹೆಚ್ಚಿನ ಚಿಕಿತ್ಸೆಗಾಗಿ ಅರಸೀಕೆರೆ ಮತ್ತು ಸ್ಥಳೀಯರ ಸಹಾಯದಿಂದ ತಕ್ಷಣವೇ ಜಿಲ್ಲಾಸ್ಪತ್ರೆಗೆ ದಾಖಲಿಸಲಾಗಿದೆ. ಮೃತ ಜಿಲಾನಿ ಆಟೋಮೊಬೈಲ್ ಉದ್ಯಮ ನಡೆಸುತ್ತಿದ್ದು, ಮೊಸಿನ್ ವೆಲ್ಡಿಂಗ್ ವೃತ್ತಿ ಮಾಡುತ್ತಿದ್ದರು. ಸ್ನೇಹಿತನ ನಿಶ್ಚಿತಾರ್ಥಕ್ಕಾಗಿ ಐವರು ಯುವಕರು ಇನೋವಾ ಕಾ–ರಿನಲ್ಲಿ ಅರಸೀಕೆರೆಯಿಂದ ಜಾವಗಲ್ ಮಾರ್ಗವಾಗಿ ಬೇಲೂರಿಗೆ ತೆರಳುತ್ತಿದ್ದಾಗ ಕೆ.ಬಿ.ಹಾಳ್ ಬಳಿ ತಲುಪುತ್ತಿದ್ದಂತೆ ಕಾರು ಚಾಲಕನ ನಿಯಂತ್ರಣ ತಪ್ಪಿ ರಸ್ತೆ ಪಕ್ಕದಲ್ಲಿದ್ದ ಆಳವಾದ ಹಳ್ಳಕ್ಕೆ ಉರುಳಿ ಬಿದ್ದಿದೆ. ಅಪಘಾತದ ರಭಸಕ್ಕೆ ಕಾರು ಸಂಪೂರ್ಣ ಜಖಂಗೊಂಡಿದ್ದು, ಜಿಲಾನಿ ಹಾಗೂ ಮೊಸಿನ್ ತೀವ್ರ ರಕ್ತಸ್ರಾವದಿಂದ ಸ್ಥಳದಲ್ಲೇ ಕೊನೆಯುಸಿರೆಳೆದಿದ್ದಾರೆ. ಘಟನಾ ಸ್ಥಳಕ್ಕೆ ಜಾವಗಲ್ ಪೊಲೀಸ್ ಠಾಣೆಯ ಅಧಿಕಾ–ರಿಗಳು ಭೇಟಿ ನೀಡಿ ಪರಿಶೀಲನೆ ನಡೆಸಿ ಪ್ರಕರಣ ದಾಖಲಿಸಿ ತನಿಖೆಯನ್ನು ಮುಂದುವರೆಸಿದ್ದಾರೆ.

## ಶಾಸಕರಾದ ಶಿವರಾಜ್ ತಂಗಡಗಿ, ಕಂಪ್ಲಿ ಜೆ.ಎನ್.ಗಣೇಶಗೆ ಸಚಿವ ಸ್ಥಾನ ನೀಡುವಂತೆ ಭೂನ್ಯಾಯ ಮಂಡಳಿ ಸದಸ್ಯ ವಿ.ಮೌನೇಶ ಒತ್ತಾಯ

❏ ನೈಜ್ಯ ದೆಸೆ ನ್ಯೂಸ್

ಬಳ್ಳಾರಿ / ಕಂಪ್ಲಿ : ಸಾಮಾಜಿಕ ನ್ಯಾಯದ ತತ್ವದಡಿ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು ಸಚಿವ ಸಂಪುಟದಲ್ಲಿ ಭೋವಿ ಸಮುದಾಯಕ್ಕೆ ಸಚಿವ ಸ್ಥಾನ ಮತ್ತು ಕಂಪ್ಲಿ ಶಾಸಕ ಜೆ.ಎನ್.ಗಣೇಶಗೆ ಸಚಿವ ಸ್ಥಾನ ನೀಡಬೇಕು ಎಂದು ಕಂಪ್ಲಿ ತಾಲೂಕು ಭೂನ್ಯಾಯ ಮಂಡಳಿ ಸದಸ್ಯ ಮತ್ತು ಭೋವಿ ಸಮಾಜದ ಯುವ ನಾಯಕ ವಿ.ಮೌನೇಶ್ ಆಗ್ರಹಿಸಿದರು.

ಅವರು ಸೋಮವಾರ ಪಟ್ಟಣದಲ್ಲಿ ಪತ್ರಕರ್ತರೊಂದಿಗೆ ಮಾತನಾಡಿ, 'ಶಾಸಕರಾದ ಶಿವರಾಜ್ ತಂಗಡಗಿ, ಮತ್ತು ಕಂಪ್ಲಿ ಜೆ. ಎನ್.ಗಣೇಶ ಅವರು ಪಕ್ಷದ ಸಂಘಟನೆ ಹಾಗೂ ಸಾರ್ವಜನಿಕ ಜೀವನದಲ್ಲಿ ಗಮನಾರ್ಹ ಸೇವೆ ಸಲ್ಲಿಸಿದ್ದಾರೆ. ಇವ–ರಿಗೆ ಸಚಿವ ಸ್ಥಾನ ನೀಡುವ ಮೂಲಕ ಸಾಮಾಜಿಕ ನ್ಯಾಯದ ಸಂದೇಶ ಸಾರಬೇಕು'. 'ಭೋವಿ ಸಮುದಾಯವು ರಾಜ್ಯದ ಅಭಿವೃದ್ಧಿಗೆ ಮಹತ್ವದ ಕೊಡುಗೆ ನೀಡಿದ್ದು, ವಿಧಾನಸೌಧ ನಿರ್ಮಾಣದಿಂದ ಹಿಡಿದು ವಿವಿಧ ನೀರಾವರಿ ಯೋಜನೆಗಳ ಅಭಿವೃದ್ಧಿಯವರೆಗೆ ಸಮುದಾಯದ ಪಾತ್ರ ಪ್ರಮುಖವಾಗಿದೆ.



ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಅವಧಿಯಲ್ಲೂ ಶಿವರಾಜ ತಂಗಡಗಿ ಅವರಿಗೆ ಸಚಿವ ಸ್ಥಾನ ನೀಡಿರುವುದು ಗಮನಾರ್ಹವಾಗಿದೆ. ಇದ–ರಿಂದ ರಾಜ್ಯದ ಜನರ ಸೇವೆ ಮಾಡಲಾಗಿದೆ. ಇನ್ನೂ ಭೋವಿ ಸಮಾಜದ ಅಭಿವೃದ್ಧಿ ಜೊತೆಗೆ ರಾಜ್ಯದ ಜನರ ಸೇವೆಗಾಗಿ ತಂಡಗಿ ಅವರಿಗೆ ಮತ್ತೊಮ್ಮೆ ಸಚಿವ ಸ್ಥಾನ ಕಲ್ಪಿಸಬೇಕು. ಕಳೆದ ಎಂಟು ವರ್ಷದಲ್ಲಿ ಶಾಸಕ ಜೆ.ಎನ್.ಗಣೇಶ ಅವರು ಕ್ಷೇತ್ರದಲ್ಲಿ ಅನೇಕ ಜನಪರ ಕಾರ್ಯಗಳೊಂದಿಗೆ ಮಾದರಿಯಾಗಿದ್ದಾರೆ. ಕಾಂಗ್ರೆಸ್ನ ಶಿಸ್ತಿನ ಸಿಪಾಯಿಯಾಗಿ ಸೇವೆ ಸಲ್ಲಿಸುತ್ತಿರುವ ಶಾಸಕ ಗಣೇಶ ಇವರಿಗೆ ಸ್ಥಾನ ನೀಡಬೇಕೆಂಬುದು ಬಹುದಿನದ ಹಕ್ಕೊತ್ತಾಯವಾಗಿದೆ.

ಸಿಎಂ ಡಿ.ಕೆ.ಶಿವುಕುಮಾರ ಅವರ ಮೊದಲ ಹಂತದ ಸಂಪುಟ ರಚನೆಯಲ್ಲಿ ಶಾಸಕರಾದ ಶಿವರಾಜ ತಂಗಡಗಿ ಮತ್ತು ಜೆ. ಎನ್.ಗಣೇಶಗೆ ಅವಕಾಶ ದೊರಕದಿರುವುದು ಅಸಮಾಧಾನಕ್ಕೆ ಕಾರಣವಾಗಿದೆ. ರಾಜ್ಯ ಮತ್ತು ಕ್ಷೇತ್ರದ ಹಿತಾಸಕ್ತಿ ಗಮನದಲ್ಲಿಟ್ಟು ಕೊಂಡು ಎರಡನೇ ಸಂಪುಟ ವಿಸ್ತರಣೆ ವೇಳೆ ಕಡ್ಡಾಯವಾಗಿ ಇಬ್ಬರಿಗೂ ಸಚಿವ ಸ್ಥಾನ ನೀಡಬೇಕೆಂದು ಒತ್ತಾಯಿಸಿದರು.

## "ಸರ್ಕಾರಿ ಹೈಸ್ಕೂಲಲ್ಲಿ ಖಾಯಂ ಶಿಕ್ಷಕರ ನೇಮಿಸಲು ಆಗ್ರಹ"

**ಸರ್ಕಾರಿ ಶಾಲೆಗಳಲ್ಲಿ ಖಾಯಂ ಶಿಕ್ಷಕರ ಕೊರತೆಯಿಂದ ಮಕ್ಕಳ ಶೈಕ್ಷಣಿಕ ಗುಣಮಟ್ಟ ಕುಂಠಿತ ಆಗುತ್ತಿದೆ ಎಂಬುವುದು ಪೋಷಕರ ಆತಂಕವಾಗಿದೆ.**

❏ ನೈಜ್ಯ ದೆಸೆ ನ್ಯೂಸ್

ಕವಿತಾಳ: ಪಟ್ಟಣದ ಬಾಲಕರ ಸರ್ಕಾರಿ ಪ್ರೌಢ (ಕರ್ನಾಟಕ ಪಬ್ಲಿಕ್ ಶಾಲೆ) ಶಾಲೆಯಲ್ಲಿ ಖಾಯಂ ಶಿಕ್ಷಕರ ಕೊರತೆ ಹೆಚ್ಚಿದ್ದು, ಇಬ್ಬರು ಚಿತ್ರಕಲಾ ಶಿಕ್ಷಕರು ಅತಿಥಿ ಶಿಕ್ಷಕರ ಜೊತೆಗೆ 430 ಮಕ್ಕಳಿಗೆ ಪಾಠ ಮಾಡಬೇಕಿದೆ. ಶಿಕ್ಷಕರ ಕೊರತೆಯಿಂದ ಮಕ್ಕಳ ಸಂಖ್ಯೆ ಕಡಿಮೆ ಆಗುತ್ತಿರುವುದರ ಜೊತೆಗೆ ಶೈಕ್ಷಣಿಕ ಭವಿಷ್ಯ ಹಾಳಾಗುತ್ತಿದೆ ಎಂದು ಪಾಲಕರು ಅಸಮಾಧಾನ ವ್ಯಕ್ತಪಡಿಸುತ್ತಿದ್ದಾರೆ.

8 ರಿಂದ 10ನೇ ತರಗತಿವರೆಗೆ ಒಟ್ಟು 430 ವಿದ್ಯಾರ್ಥಿಗಳು ವ್ಯಾಸಂಗ ಮಾಡುತ್ತಿದ್ದಾರೆ. ಇತ್ತೀಚೆಗಷ್ಟೆ ಇಲ್ಲಿಗೆ ವರ್ಗಾವಣೆಯಾಗಿ ಬಂದಿರುವ ಇಬ್ಬರು ಖಾಯಂ ಚಿತ್ರಕಲಾ ಶಿಕ್ಷಕರನ್ನು ಹೊರತುಪಡಿಸಿದರೆ ಬಹುತೇಕ ವಿಷಯ



ಶಿಕ್ಷಕರು ಇಲ್ಲಿಂದ ವರ್ಗಾವಣೆಯಾಗಿದ್ದಾರೆ.

ಪಾಠ ಮಾಡಲು ಒಬ್ಬ ಖಾಯಂ ಶಿಕ್ಷಕರಿಲ್ಲದ ಕಾರಣ ಐವರು ಅತಿಥಿ ಶಿಕ್ಷಕರು ತರಗತಿಗಳನ್ನು ನೋಡಬೇಕಾದ ಪರಿಸ್ಥಿತಿ ಉಂಟಾಗಿದೆ. ಕಾಯಂ ಶಿಕ್ಷಕರು ಇಲ್ಲದ ಕಾರಣ ಮಕ್ಕಳ ಶೈಕ್ಷಣಿಕ ಗುಣಮಟ್ಟ ಕುಂಠಿತಗೊಳ್ಳುತ್ತಿದೆ ಎಂದು ಪೋಷಕರು ಬೇಸರ ವ್ಯಕ್ತಪಡಿಸಿದರು. ಒಟ್ಟು ಶಿಕ್ಷಕರ ಮಂಜೂರಾತಿ 21 ಇದ್ದು, ಇದರಲ್ಲಿ ಇಬ್ಬರು ಚಿತ್ರಕಲಾ ಶಿಕ್ಷಕರನ್ನ ಬಿಟ್ಟು ಉಳಿದ 19 ಹುದ್ದೆಗಳು ಖಾಲಿ ಇವೆ. ಇದರಿಂದ ಬಡ, ಕೂಲಿ ಕಾರ್ಮಿಕರ ಮಕ್ಕಳಿಗೆ ಆಸರೆ ಆಗಬೇಕಿದ್ದ ಸರ್ಕಾರಿ ಶಾಲೆಗಳು ಇದೀಗ ಶಿಕ್ಷಕರೇ ಇಲ್ಲದ ಕಾರಣ ಮಕ್ಕಳು ಗುಣಮಟ್ಟದ ಶಿಕ್ಷಣದಿಂದ ವಂಚಿತರಾಗುವಂತಾಗಿದೆ. ಮಕ್ಕಳನ್ನು ಶಾಲೆಗೆ ಕಳುಹಿಸಲು ಹಿಂದೇಟು ಹಾಕುವಂತಾಗಿದೆ ಹೀಗಾಗಿ ಕೂಡಲೇ ಶಿಕ್ಷಕರನ್ನು ನೇಮಕ ಮಾಡಬೇಕು ಎಂದು ಮೌನೇಶ್ ಹಿರೇಕುರುಬರ್, ತಿಮ್ಮಣ್ಣಯಾದವ, ಒತ್ತಾಯಿಸಿದರು.

ಮೆರಿಟ್ ಆಧಾರದ ಮೇಲೆ ಅತಿಥಿ ಶಿಕ್ಷಕರನ್ನು ನೇಮಕಾತಿ ಮಾಡಿಕೊಳ್ಳಲಾಗುವುದು ಸದ್ಯ ಪ್ರಭಾರಿ ಮುಖ್ಯೋಪಾಧ್ಯಾಯರನ್ನು ನೇಮಕ ಮಾಡುವುದಾಗಿ ಬಿಇಒ ಚಂದ್ರಶೇಖರ ದೊಡ್ಡಮನಿ ಹೇಳಿದರು.

# ಜಾಲಹಳ್ಳಿಯಲ್ಲಿ ಕೆಪಿಆರ್‌ಎಸ್–ಡಿವೈಎಫ್‌ಐ ಧರಣಿ ಸತ್ಯಾಗ್ರಹ 6ನೇ ದಿನಕ್ಕೆ ಅಧಿಕಾರಿಗಳ ನಿರ್ಲಕ್ಷ್ಯ ಖಂಡನೆ – ರಸ್ತೆತಡೆ ಹೋರಾಟದ ಎಚ್ಚರಿಕೆ

❏ ನೈಜ್ಯ ದೆಸೆ ನ್ಯೂಸ್

**ಜಾಲಹಳ್ಳಿ: ಗ್ರಾಮದ ಅಂಬೇಡ್ಕರ್ ವೃತ್ತದಲ್ಲಿ ಕರ್ನಾಟಕ ಪ್ರಾಂತ ರೈತ ಸಂಘ (ಕೆಪಿಆರ್‌ಎಸ್) ಗ್ರಾಮ ಸಮಿತಿ ಹಾಗೂ ಡಿವೈಎಫ್‌ಐ ವಲಯ ಸಮಿತಿ ನೇತೃತ್ವದಲ್ಲಿ ವಿವಿಧ ಜನಪರ ಬೇಡಿಕೆಗಳನ್ನು ಈಡೇರಿಸುವಂತೆ ಆಗ್ರಹಿಸಿ ನಡೆಯುತ್ತಿರುವ ಬೃಹತ್ ಧರಣಿ ಸತ್ಯಾಗ್ರಹ 6ನೇ ದಿನಕ್ಕೆ ಕಾಲಿಟ್ಟಿದೆ.**

ಪ್ರತಿಭಟನೆಯನ್ನು ಉದ್ದೇಶಿಸಿ ಮಾತನಾಡಿದ ರೈತ ಸಂಘದ ಮುಖಂಡರದ ರಾಜು ನಾಯಕ ಅವರು, ಕೆಲವು ಬೇಡಿಕೆಗಳಿಗೆ ಅಧಿಕಾರಿಗಳು ಸ್ಪಂದಿಸಿದ್ದರೂ ಮೂರು ಪ್ರಮುಖ ಬೇಡಿಕೆಗಳು ಇನ್ನೂ ಈಡೇರಿಲ್ಲ ಎಂದು ಆರೋಪಿಸಿದರು. ಮುಂದಿನ ಎರಡು ದಿನಗಳೊಳಗೆ ಸಮಸ್ಯೆಗಳಿಗೆ ಪರಿಹಾರ ನೀಡದಿದ್ದರೆ ಅಂಬೇಡ್ಕರ್ ವೃತ್ತದಲ್ಲಿ ರಾಜ್ಯ ಹೆದ್ದಾರಿ ರಸ್ತೆ ತಡೆ ಹೋರಾಟ ನಡೆಸುವುದಾಗಿ ಎಚ್ಚರಿಕೆ ನೀಡಿದರು.

ಈಡೇರದ ಪ್ರಮುಖ ಬೇಡಿಕೆಗಳು



1. ಅಂಬೇಡ್ಕರ್ ವೃತ್ತದಿಂದ ರಂಗನಾಥ ದೇವಸ್ಥಾನದವರೆಗೆ ನಿರ್ಮಿಸಿರುವ ಕಳಪೆ ಸಿಸಿ ರಸ್ತೆ ಹಾಗೂ ಚರಂಡಿ ಕಾಮಗಾರಿಯ ಕುರಿತು ಉನ್ನತ ಮಟ್ಟದ ತನಿಖೆ ನಡೆಸಿ ಮರುನಿರ್ಮಾಣ ಮಾಡಬೇಕು.
2. ಬುಳ್ಳಯ್ಯನ ಕಟ್ಟಿಯಿಂದ ಹಟ್ಟಿ ಮುಖ್ಯ ರಸ್ತೆಯವರೆಗೆ ಬಾಕಿ ಉಳಿದಿರುವ ಸಿಸಿ ರಸ್ತೆ ಕಾಮಗಾರಿಯನ್ನು ತಕ್ಷಣ ಆರಂಭಿಸಬೇಕು.
3. ಸಂತೆಯ ಮೈದಾನವನ್ನು ಅತಿಕ್ರಮಣದಿಂದ ಮುಕ್ತಗೊಳಿಸಿ ಅಗತ್ಯ ಕ್ರಮ ಕೈಗೊಳ್ಳಬೇಕು.

ರೈತ ಸಂಘದ ಮುಖಂಡ ಹನುಮಂತ ಮಡಿವಾಳ ಮಾತನಾಡಿ, ಪ್ರತಿಭಟನೆಯ ಹಿನ್ನೆಲೆಯಲ್ಲಿ ಜೆಸ್ಕಾಂ, ಕೆಕೆಆರ್‌ಡಿಬಿ, ಕೃಷಿ ಹಾಗೂ ಪಂಚಾಯತ್ ರಾಜ್ ಇಲಾಖೆಗಳ ಅಧಿಕಾರಿಗಳು ಸ್ಥಳಕ್ಕೆ ಭೇಟಿ ನೀಡಿ ಪ್ರತಿಭಟನಾಕಾರರೊಂದಿಗೆ ಮಾತುಕತೆ ನಡೆಸಿದ್ದಾರೆ ಎಂದು ತಿಳಿಸಿದರು.

ಕೆಕೆಆರ್‌ಡಿಬಿ ಅಧಿಕಾರಿಗಳು ಅಂಬೇಡ್ಕರ್ ವೃತ್ತದಿಂದ ರಂಗನಾಥ ದೇವಸ್ಥಾನದವರೆಗೆ ರಸ್ತೆ ಪರಿಶೀಲನೆ ನಡೆಸಿ ಹೊಸ ರಸ್ತೆ ನಿರ್ಮಿಸುವ ಭರವಸೆ ನೀಡಿದ್ದು, ಬುಳ್ಳಯ್ಯನ ಕಟ್ಟಿಯಿಂದ ಹಟ್ಟಿ ಮುಖ್ಯ ರಸ್ತೆಯವರೆಗೆ ಬಾಕಿ ಉಳಿದಿರುವ ಕಾಮಗಾರಿಯನ್ನು ಶೀಘ್ರ ಆರಂಭಿಸುವುದಾಗಿ ತಿಳಿಸಿದ್ದಾರೆ. ಆದರೆ ಕಾಮಗಾರಿಗಳ ಆರಂಭದಲ್ಲಿ ವಿಳಂಬವಾಗುತ್ತಿರುವುದರಿಂದ ಸಂಬಂಧಪಟ್ಟ ಅಧಿಕಾರಿಗಳ ವಿರುದ್ಧ ಕ್ರಮ ಕೈಗೊಳ್ಳಬೇಕು ಎಂದು ಪ್ರತಿಭಟನಾಕಾರರು ಒತ್ತಾಯಿಸಿದರು.

ಬೇಡಿಕೆಗಳು ಈಡೇರದಿದ್ದಲ್ಲಿ ಧರಣಿ ಸತ್ಯಾಗ್ರಹವನ್ನು ಮುಂದುವರಿಸುವುದರ ಜೊತೆಗೆ ರಾಜ್ಯ ಹೆದ್ದಾರಿ ರಸ್ತೆ ತಡೆ ಹೋರಾಟ ಹಮ್ಮಿಕೊಳ್ಳಲಾಗುವುದು ಎಂದು ಪ್ರತಿಭಟನಾಕಾರರು ಎಚ್ಚರಿಕೆ ನೀಡಿದರು.

> "ತಾಲೂಕಿನಲ್ಲಿ ಅಧಿಕಾರಿಗಳು ಸಾರ್ವಜನಿಕರ ಸಮಸ್ಯೆಗಳಿಗೆ ಸಮರ್ಪಕವಾಗಿ ಸ್ಪಂದಿಸುತ್ತಿಲ್ಲ. ಜನಪ್ರತಿನಿಧಿಗಳ ನಿರ್ಲಕ್ಷ್ಯವೇ ಅಧಿಕಾ–ರಿಗಳ ಜವಾಬ್ದಾರಿಯ ಕೊರತೆಗೆ ಪ್ರಮುಖ ಕಾರಣವಾಗಿದೆ."
> ರಿಯಾಜ್ ಆರ್ತಿ, ಡಿವೈಎಫ್‌ಐ ಮುಖಂಡ

ಈ ಸಂದರ್ಭದಲ್ಲಿ ಹನುಮಂತ ಮಡಿವಾಳ, ರಂಗನಾಥ ಬುಂಕಲದೊಡ್ಡಿ, ರಾಜು ನಾಯಕ, ರಿಯಾಜ್ ಆರ್ತಿ, ಶಬ್ಬೀರ್, ಮೌನೇಶ, ದುರುಗಪ್ಪ ಹೊರಟ್ಟಿ, ಕಲೀಮುದ್ದಾರ್, ಹನುಮಂತ ಗು–ರಿಕಾರ್, ರಂಗನಾಥ್ ಯಾಪ್ಲಿ, ಬಸವರಾಜ್ ಲಿಂಗಹಳ್ಳಿ, ಮೌನೇಶ್ ದಾಸರ್, ಬಸವರಾಜ್ ವಂದಲಿ, ಮೈಬೂಬ್ ಕುರುಕುಂದಿ, ಹನುಮಂತ ಕುನಗುಂದಿ, ಗ್ರಾಮ ಪಂಚಾಯಿತಿ ಸದಸ್ಯರಾದ ಮಕ್ತುಮ್ ಭಾಷಾ, ಕುಮಾರ ಚಪ್ಪಳಕಿ, ಶಿವ ಮಾನ್ಯ ಥೈಪ್ಲಿ ಸೇರಿದಂತೆ ಹಲವರು ಉಪಸ್ಥಿತರಿದ್ದರು.

ವರದಿ: ಖಾಜಾ ಹುಸೇನ್ ಬಾಬಾ, ಜಾಲಹಳ್ಳಿ

# ನೇಮಕಾತಿ ಪ್ರಕಟಣೆ

ರಾಷ್ಟ್ರೀಯ ಆರೋಗ್ಯ ಅಭಿಯಾನ ಯೋಜನೆಯ NUHM, CHILD HEALTH ಮತ್ತು NTEP ಕಾರ್ಯಕ್ರಮಗಳ ಅಡಿಯಲ್ಲಿ ಖಾಲಿ ಇರುವ ವೈದ್ಯರು ಮತ್ತು ಫಾರ್ಮಸಿಸ್ಟ್ ಹುದ್ದೆಗಳನ್ನು ದಿನಾಂಕ: 31-03-2027 ರ ವರೆಗಿನ ಅವಧಿಗೆ ಸಂಪೂರ್ಣ ಗುತ್ತಿಗೆ ಆಧಾರದ ಮೇಲೆ ವಾಕ್ ಇನ್ ಪ್ರಕ್ರಿಯೆ ಮೂಲಕ ನೇಮಕಾತಿ ಮಾಡಿಕೊಳ್ಳಲು ಅರ್ಹ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ.ಅಭ್ಯರ್ಥಿಗಳಿಗೆ ಕನ್ನಡ ಭಾಷಾ ಜ್ಞಾನದ ಅವಶ್ಯಕತೆ ಕಡ್ಡಾಯವಾಗಿರುತ್ತದೆ. ಆಸಕ್ತರು ಜಿ.ಬಿ.ಎ ವೆಬ್‌ಸೈಟ್‌ನಲ್ಲಿರುವ ಅರ್ಜಿ ನಮೂನೆಯನ್ನು ಡೌನ್‌ಲೋಡ್ ಮಾಡಿಕೊಂಡು ಭರ್ತಿ ಮಾಡಿದ ಅರ್ಜಿಯೊಂದಿಗೆ 02 ಪ್ರತಿ Checklist ಹಾಗೂ ಸಂಬಂಧಿಸಿದ ವಿದ್ಯಾರ್ಹತೆಯ ಮೂಲ ದಾಖಲೆಗಳನ್ನು ಒಂದು ಸ್ವಯಂ ದೃಢೀಕೃತ ಜೆರಾಕ್ಸ್ ಪ್ರತಿ ಹಾಗೂ ಎರಡು ಭಾವಚಿತ್ರಗಳೊಂದಿಗೆ ಮೇಲೆ ಸೂಚಿಸಿರುವ ಸ್ಥಳ ಮತ್ತು ದಿನಾಂಕದಂದು ವಾಕ್ ಇನ್ ಪ್ರಕ್ರಿಯೆಗೆ ಹಾಜರಾಗಲು ಸೂಚಿಸಲಾಗಿದೆ. ಸದರಿ ಹುದ್ದೆಗಳ ಸಂಖ್ಯೆಯನ್ನು ಹೆಚ್ಚಿಸುವ ಅಥವಾ ಕಡಿಮೆಗೊಳಿಸುವ ಅಧಿಕಾರವನ್ನು ಪಾಲಿಕೆಯು ಹೊಂದಿರುತ್ತದೆ. ಹೆಚ್ಚಿನ ವಿವರಗಳಿಗಾಗಿ ಗ್ರೇಟರ್ ಬೆಂಗಳೂರು ಪ್ರಾಧಿಕಾರದ ವೆಬ್ ಸೈಟ್: www.bbmp.gov.inನ್ನು ಸಂಪರ್ಕಿಸಲು ಸೂಚಿಸಲಾಗಿದೆ. NUHM ವೈದ್ಯಾಧಿಕಾರಿ (Medical Officer) 14 MBBS ಪದವಿ ಹಾಗೂ ಕರ್ನಾಟಕ ವೈದ್ಯಕೀಯ ಮಂಡಳಿ (KMC) ನೋಂದಣಿ. ವಯೋಮಿತಿ: 45 ವರ್ಷ RPC-13 (GM-6, ಇತರೆ-1, ಮಹಿಳೆ-2, ಗ್ರಾಮೀಣ-2, ಅಂಗವಿಕಲ-1), SC-A-1, SC-B-1, ST-1, CAT-1-1, 2A-2 (ಇತರೆ-1, ಮಹಿಳೆ-1), 2B-1. HK-1 (SC-A-1) ?60,000/ NUHM OµÀ¢üPÁgÀ (Pharmacist) 18 B. Pharm / D.Pharm ಹಾಗೂ ರಾಜ್ಯ ಔಷಧ ಮಂಡಳಿಯಲ್ಲಿ ನೋಂದಣಿ. ವಯೋಮಿತಿ: 40 ವರ್ಷ RPC-16 (GM-8, ಇತರೆ-2, ಮಹಿಳೆ-3, ಗ್ರಾಮೀಣ-2, ಅಂಗವಿಕಲ-1), SC-A-1, SC-B-1, SC-C-1, ST-1, CAT-1-1, 2A-2 (ಇತರೆ-1, ಮಹಿಳೆ-1), 2B-1. HK-2 (SC-A-1, GM-1) ?20,594/ NTEP ವೈದ್ಯಾಧಿಕಾರಿ (Medical Officer) 03 MBBS ಪದವಿ ಹಾಗೂ KMC ನೋಂದಣಿ. ವಯೋಮಿತಿ: 45 ವರ್ಷ RPC-3 (GM-1, SC-A-1, ST-1) 60,000/- CHILD HEALTH ವೈದ್ಯಾಧಿಕಾರಿ (Medical Officer)06 MBBS ಪದವಿ ಹಾಗೂ KMC ನೋಂದಣಿ. ವಯೋಮಿತಿ: 45 ವರ್ಷ RPC-6 (GM-3 [ಇತರೆ-1, ಮಹಿಳೆ-1, ಗ್ರಾಮೀಣ-1], SC-A-1, ST-1, CAT-1-1, 2A-1) 60,000/ ನೇರ ಸಂದರ್ಶನ (Walk-in Interview) ಸ್ಥಳ:ಡಾ. ರಾಜ್‌ಕುಮಾರ್ ಗ್ಲಾಸ್ ಹೌಸ್, ಅನೆಕ್ಸ್-3 ಕಟ್ಟಡದ ಎದುರು, ಜಿಬಿಎ ಮುಖ್ಯ ಕಚೇರಿ, ಎನ್.ಆರ್. ಸ್ಕ್ವೇರ್, ಬೆಂಗಳೂರು 560002. ದಿನಾಂಕ:11-06-2026 ಸಮಯ: ಬೆಳಿಗ್ಗೆ 10.00 ರಿಂದ ಸಂಜೆ 4.00 ಗಂಟೆಯವರೆಗೆ

## ಪುಟಾಣಿ ಗಂಗಮ್ಮ ನಿಧನ

ನೈಜ್ಯ ದೆಸೆ ನ್ಯೂಸ್

ಬಳ್ಳಾರಿ / ಕಂಪ್ಲಿ: ಪಟ್ಟಣದ 10ನೇ ವಾರ್ಡಿನ ಛಲುವಾದಿ ಸಮಾಜದ ಹಿರಿಯ ಮುತ್ಸದ್ಧಿ ಪುಟಾಣಿ ಗಂಗಮ್ಮ(70) ಸೋಮವಾರ ನಿಧನರಾಗಿದ್ದಾರೆ.



ಮೃತರಿಗೆ ನಾಲ್ಕು ಜನ ಪುತ್ರರು, ಓರ್ವ ಪುತ್ರಿ ಹಾಗೂ ಬಂಧು ಬಳಗವನ್ನು ಅಗಲಿದ್ದಾರೆ. ಸಂಜೆ ಸಣಾಪುರ ರಸ್ತೆಯಲ್ಲಿರುವ ರುದ್ರಭೂಮಿಯಲ್ಲಿ ಅಂತ್ಯ ಸಂಸ್ಕಾರ ನೆರವೇರಿತು. ಪಟ್ಟಣದ ತಹಶೀಲ್ದಾರ್ ಕಚೇರಿ(ನಾಡಕಛೇರಿ)ಯ ಕಂಪ್ಯೂಟರ್ ಆಪರೇಟರ್ ಪಿ.ಸಿ.ಅಂಜಿನಪ್ಪ ಅವರ ತಾಯಿಯಾಗಿದ್ದಾರೆ. ಛಲುವಾದಿ ಸಮಾಜದವರು ಸಂತಾಪ ಸೂಚಿಸಿದರು.

# ಎಂಎಲ್‌ಸಿ ತಿಪ್ಪಣ್ಣಪ್ಪ ಕಮಕನೂರುಗೆ ಸಚಿವ ಸ್ಥಾನ ನೀಡುವಂತೆ ಒತ್ತಾಯ

ನೈಜ್ಯ ದೆಸೆ ನ್ಯೂಸ್

ಬಳ್ಳಾರಿ / ಕಂಪ್ಲಿ : ಕರ್ನಾಟಕ ವಿಧಾನ ಪರಿಷತ್ ಸದಸ್ಯ ಹಾಗೂ ಕಾಂಗ್ರೆಸ್ ಹಿರಿಯ ಮುಖಂಡ ಗಂಗಾಮತ ಸಮಾಜದ ತಿಪ್ಪಣ್ಣಪ್ಪ ಕಮಕನೂರು ಇವರಿಗೆ ಸಚಿವ ಸ್ಥಾನ ನೀಡಬೇಕೆಂದು ಕಂಪ್ಲಿ ತಾಲೂಕು ಗಂಗಾಮತಸ್ಥರ(ಬೆಸ್ತರ) ಸಂಘದ ಅಧ್ಯಕ್ಷ ಎಲೆಗಾರ ನಾಗರಾಜ ಒತ್ತಾಯಿಸಿದರು.

ಅವರು ಸೋಮವಾರ ಪಟ್ಟಣದ ಗಂಗಾನಗರದ ಯಲ್ಲಮ್ಮ ದೇವಸ್ಥಾನ ಆವರಣದಲ್ಲಿ ನಡೆಸಿದ ಗಂಗಾಮತ ಸಮಾಜದ ಸಂಘಟನಾ ಸಭೆಯ ಅಧ್ಯಕ್ಷತೆವಹಿಸಿ ಮಾತನಾಡಿ, ಕಂಪ್ಲಿ ಸೇರಿದಂತೆ ರಾಜ್ಯದಲ್ಲಿ ಸುಮಾರು 40 ಲಕ್ಷಕ್ಕೂ ಹೆಚ್ಚು ಗಂಗಾಮತ(ಬೆಸ್ತರ) ಜನಸಂಖ್ಯೆ ಹೊಂದಿದ್ದು, ಈ ಸಮಾಜವು ಶೈಕ್ಷಣಿಕ, ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯವಾಗಿ ಹಿಂದುಳಿದಿದೆ. ಇಂದಿಗೂ ತಳಮಟ್ಟದಲ್ಲಿರುವ ಈ ಬಲಿಷ್ಠ



ಸಮಾಜವು ಪ್ರಗತಿಯ ಪಥದತ್ತ ಮುನ್ನುಗ್ಗಲು, ಸಮಾಜದ ಧ್ವನಿಯಾಗಿ ರಾಜ್ಯ ಮಟ್ಟದಲ್ಲಿ ಕೆಲಸ ನಿರ್ವಹಿಸಲು ರಾಜಕೀಯ ಚತುರನ ಅವಶ್ಯಕತೆ ಇದೆ. ಸಮಾಜವೂ ಎಲ್ಲಾ ಹಂತದಲ್ಲಿ ಅಭಿವೃದ್ಧಿ ಹೊಂದಲು ಮತ್ತು ಸರ್ಕಾರದ ಮಟ್ಟದಲ್ಲಿ ವಿಶೇಷ ಯೋಜನೆಗಳನ್ನು ಸಮಾಜದ ಜನತೆಗೆ ಒದಗಿಸಲು ಮತ್ತು ವಿಧಾನಸೌಧದಲ್ಲಿ ಮಾತನಾಡಬೇಕಾಗಿದೆ.

ಈ ದಿಸೆಯಲ್ಲಿ ಸಮಾಜದ ಹಿರಿಯ ಮುತ್ಸದ್ಧಿ ಮತ್ತು ಕಾಂಗ್ರೆಸ್‌ನ ಧುರಿಣ ನಾಯಕ ತಿಪ್ಪಣ್ಣಪ್ಪ ಕಮಕನೂರ್ ಇವರಿಗೆ ಸಚಿವ ನೀಡಿದರೆ, ಸಮಾಜಕ್ಕೆ ಒಂದೊಳ್ಳೆ ಸ್ಥಾನ ಸಿಕ್ಕಂತಾಗುತ್ತದೆ. ಈಗಾಗಲೇ ಕರ್ನಾಟಕ ವಿಧಾನ ಪರಿಷತ್‌ನ ನೂತನ ಸದಸ್ಯರಾಗಿ ಹೊರ ಹೊಮ್ಮಿದ್ದು, ಸಿಎಂ ಡಿ.ಕೆ.ಶಿವಕುಮಾರ ನೇತೃತ್ವದ ಕಾಂಗ್ರೆಸ್ ಸರ್ಕಾರದಲ್ಲಿ ಸಚಿವ ಸ್ಥಾನ ನೀಡಬೇಕೆಂದು ಆಗ್ರಹಿಸಿದರು.

ಈ ಸಂದರ್ಭದಲ್ಲಿ ಮುಖಂಡರಾದ ಜೋಳಮಾರೋ ಈರಪ್ಪ, ಕರೇಕಲ್ ಮನೋಹರ, ಮಣ್ಣೂರು ನಾಗರಾಜ, ಬಿ.ಈರಪ್ಪ, ಮುದ್ದಾಪುರ ತಾಯಣ್ಣ, ನಡವಿ ಮಲ್ಲಿಕಾರ್ಜುನ, ಕಟ್ಟೆ ದುರುಗಪ್ಪ, ಅಯೋಧ್ಯ ರಮೇಶ, ಟಿ.ಗಂಗಣ್ಣ, ಬಿ.ರಾಘವೇಂದ್ರ, ಇಟಗಿ ಈರಣ್ಣ, ರಾಮಸಾಗರ ದುರುಗಪ್ಪ, ಸುಧಾಕರ, ಮಹೇಶ, ತಳವಾರ ಮಲ್ಲಿಕಾರ್ಜುನ, ಯಲ್ಲಪ್ಪ, ಕರೇಕಲ್ ಪ್ರಕಾಶ, ಲಬೇದ್ ವಿರೇಶ, ಅಯೋಧ್ಯ ಗಣೇಶ, ಇಟಗಿ ವಿರುಪಣ್ಣ, ಬಿ.ಮಲ್ಲಿಕಾರ್ಜುನ, ಸೆರೆಗಾರ ನಾಗರಾಜ, ಚಾಂಗಿ ಮಂಜುನಾಥ, ಸಂದೀಪ್, ಸಣ್ಣಪ್ಪ, ಗುರುರಾಜ ಸೇರಿದಂತೆ ಸಮಾಜದವರು ಉಪಸ್ಥಿತರಿದ್ದರು.

# ಎನ್.ಎಸ್. ಬೋಸರಾಜು ಅವರಿಗೆ ಸಚಿವ ಸ್ಥಾನ ನೀಡುವಂತೆ ಕಾಂಗ್ರೆಸ್ ಮುಖಂಡರ ಆಗ್ರಹ

ನೈಜ್ಯ ದೆಸೆ ನ್ಯೂಸ್

ಮಾನ್ವಿ: ಕಾಂಗ್ರೆಸ್ ಪಕ್ಷದ ಹಿರಿಯ ಮುಖಂಡ, ಮಾಜಿ ಸಚಿವ ಹಾಗೂ ಕಲ್ಯಾಣ ಕರ್ನಾಟಕ ಭಾಗದ ಅನುಭವಿ ರಾಜಕಾರಣಿಯಾಗಿರುವ ಎನ್.ಎಸ್. ಬೋಸರಾಜು ಅವರಿಗೆ ಎರಡನೇ ಹಂತದ ಸಚಿವ ಸಂಪುಟ ವಿಸ್ತರಣೆಯಲ್ಲಿ ಸಚಿವ ಸ್ಥಾನ ನೀಡಬೇಕೆಂದು ಪುರಸಭೆಯ ಮಾಜಿ ಸದಸ್ಯ ಹಾಗೂ ಕಾಂಗ್ರೆಸ್ ಹಿರಿಯ ಮುಖಂಡ ಜಿ. ಸಮದಾನಿ ನಾಯ್ಕ ಆಗ್ರಹಿಸಿದರು.

ಭಾನುವಾರ ತಮ್ಮ ನಿವಾಸದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಎನ್.ಎಸ್. ಬೋಸರಾಜು ಅವರು ಜಿಲ್ಲಾ ಕಾಂಗ್ರೆಸ್ ಸಮಿತಿ ಅಧ್ಯಕ್ಷರಾಗಿದ್ದ ಸಂದರ್ಭದಲ್ಲಿ ರಾಯಚೂರು ಮತ್ತು ಕೊಪ್ಪಳ ಜಿಲ್ಲೆಗಳಲ್ಲಿ ಕಾಂಗ್ರೆಸ್ ಪಕ್ಷವನ್ನು ಬಲಿಷ್ಠವಾಗಿ ಸಂಘಟಿಸಿದ್ದಾರೆ. ಅಲ್ಲದೇ ತೆಲಂಗಾಣ ರಾಜ್ಯದ ಚುನಾವಣೆಯ ವೇಳೆ ಪಕ್ಷದ ಉಸ್ತುವಾರಿಯಾಗಿ ಕಾರ್ಯನಿರ್ವಹಿಸಿ ಕಾಂಗ್ರೆಸ್ ಅಧಿಕಾರಕ್ಕೆ ಬರಲು ಮಹತ್ವದ ಪಾತ್ರ ವಹಿಸಿದ್ದಾರೆ ಎಂದು ಹೇಳಿದರು.

ಈ ಹಿಂದೆ ಎರಡು ಬಾರಿ ಶಾಸಕರಾಗಿ, ಮೂರು ಬಾರಿ ವಿಧಾನ ಪರಿಷತ್ ಸದಸ್ಯರಾಗಿ, ಸಚಿವರಾಗಿ, ಕಾಡಾ ಅಧ್ಯಕ್ಷರಾಗಿ, ಹೆಚ್.ಕೆ.ಡಿ.ಬಿ ಅಧ್ಯಕ್ಷರಾಗಿ ಹಾಗೂ ಮುಖ್ಯಮಂತ್ರಿಗಳ ರಾಜಕೀಯ ಕಾರ್ಯದರ್ಶಿಯಾಗಿ ವಿವಿಧ ಹುದ್ದೆಗಳನ್ನು ಸಮರ್ಥವಾಗಿ ನಿರ್ವಹಿಸಿರುವ ಅವರು, ಈ ಭಾಗದ ಅಭಿವೃದ್ಧಿಗೆ ಅಪಾರ ಕೊಡುಗೆ ನೀಡಿದ್ದಾರೆ. ಸಣ್ಣ ನೀರಾವರಿ ಹಾಗೂ ಮಾಹಿತಿ ತಂತ್ರಜ್ಞಾನ ಸಚಿವರಾಗಿದ್ದ ಅವಧಿಯಲ್ಲಿ ರಾಜ್ಯದ ಹಲವೆಡೆ ನೀರಾವರಿ ಯೋಜನೆಗಳು ಮತ್ತು ವಿಜ್ಞಾನ-ತಂತ್ರಜ್ಞಾನ ಕ್ಷೇತ್ರದ ಅಭಿವೃದ್ಧಿಗೆ ಶ್ರಮಿಸಿ ಜನಮನ್ನಣೆ ಪಡೆದಿದ್ದಾರೆ ಎಂದು ತಿಳಿಸಿದರು.



ಕಲ್ಯಾಣ ಕರ್ನಾಟಕ ಭಾಗದ ಆಶಾಕಿರಣವಾಗಿರುವ ಎನ್.ಎಸ್. ಬೋಸರಾಜು ಅವರು ಅನುಭವಿ ಆಡಳಿತಗಾರರಾಗಿದ್ದು, ಪಕ್ಷ ಸಂಘಟನೆ ಹಾಗೂ ಜನಸೇವೆ ಎರಡರಲ್ಲೂ ತಮ್ಮದೇ ಆದ ಛಾಪು ಮೂಡಿಸಿದ್ದಾರೆ. ಆದ್ದರಿಂದ ಮುಖ್ಯಮಂತ್ರಿ ಸಿದ್ದರಾಮಯ್ಯ ನೇತೃತ್ವದ ಸಚಿವ ಸಂಪುಟದಲ್ಲಿ ಅವರಿಗೆ ಸ್ಥಾನ ನೀಡಿ ಈ ಭಾಗದ ಜನರ ಆಶಯವನ್ನು ಈಡೇರಿಸಬೇಕು ಎಂದು ಒತ್ತಾಯಿಸಿದರು.

ಈ ಸಂದರ್ಭದಲ್ಲಿ ಪಿಕಾರ್ಡ್ ಬ್ಯಾಂಕ್ ಮಾಜಿ ಅಧ್ಯಕ್ಷ ಸಲೀಂ ಪಾಷಾ, ಪುರಸಭೆಯ ಮಾಜಿ ಅಧ್ಯಕ್ಷ ಮಹಮ್ಮದ್ ಇಸ್ಮಾಯಿಲ್, ಕೆಒಎಫ್ ಮಾಜಿ ಅಧ್ಯಕ್ಷ ಅಮರೇಶ ಚಿಂಚಲ್, ಕಾಂಗ್ರೆಸ್ ಮುಖಂಡರಾದ ಎಂ.ಡಿ. ಮೊಹೀನ್ ಖಾನ್, ಮಹಮ್ಮದ್ ರಫಿ, ಮಹಮ್ಮದ್ ಸಾಬ್ ಸೇರಿದಂತೆ ಹಲವರು ಉಪಸ್ಥಿತರಿದ್ದರು.

# ಜಿಲ್ಲಾ ವಾಣಿಜ್ಯೋದ್ಯಮ ಸಂಘದ ವಿವಿಧ ಪದಾಧಿಕಾರಿಗಳೊಂದಿಗೆ ಕೇಂದ್ರಜಂಟಿ ಕಾರ್ಯದರ್ಶಿ ಉಜ್ವಲ ಕುಮಾರ್ ಘೋಷ್ ಸಭೆ

ನೈಜ್ಯ ದೆಸೆ ನ್ಯೂಸ್

ರಾಯಚೂರು ಜೂನ್ 08 (ಕರ್ನಾಟಕ ವಾರ್ತೆ): ರಾಯಚೂರು ಜಿಲ್ಲೆಯ ವೇಗವರ್ಧಿತ ಆರ್ಥಿಕ ಬೆಳವಣಿಗೆ, ಕೈಗಾರಿಕೀಕರಣ ಮತ್ತು ಸಾಮಾಜಿಕ ಅಭಿವೃದ್ಧಿಯ ಕುರಿತು ರಾಯಚೂರು ಜಿಲ್ಲಾ ವಾಣಿಜ್ಯೋದ್ಯಮ ಸಂಘದ ವಿವಿಧ ಪದಾಧಿಕಾರಿಗಳೊಂದಿಗೆ ಭಾರತ ಸರ್ಕಾರದ ವಾಣಿಜ್ಯ ಇಲಾಖೆಯ ಜಂಟಿ ಕಾರ್ಯದರ್ಶಿಗಳು ಹಾಗೂ ಮಹತ್ವಕಾಂಕ್ಷಿ ಜಿಲ್ಲೆಯ ರಾಯಚೂರಿನ ಕೇಂದ್ರ ಪ್ರಭಾರಿ ಅಧಿಕಾರಿಗಳಾದ ಉಜ್ವಲ ಕುಮಾರ್ ಘೋಷ್ ಅವರು ಸಭೆ ನಡೆಸಿದರು.

ಈ ವೇಳೆ ಜಿಲ್ಲಾ ವಾಣಿಜ್ಯೋದ್ಯಮಿಗಳ ಸಂಘದ ಎಸ್. ಕಮಲ್ ಕುಮಾರ್ ಅವರು ಮಾತನಾಡಿ, ರಾಯಚೂರಿನ ಬಹುದಿನಗಳ ಬೇಡಿಕೆಯಾದ ಐಐಐಟಿ, ಜವಳಿ ಪಾರ್ಕ್ ಸ್ಥಾಪನೆ, ಕೌಶಲ್ಯ ಅಭಿವೃದ್ಧಿ ಮತ್ತು ಕೈಗಾರಿಕಾ ತರಬೇತಿ



ಕೇಂದ್ರ, ರಾಯಚೂರು ಮಹತ್ವಾಕಾಂಕ್ಷೆಯ ಜಿಲ್ಲೆಗೆ ವಿಶೇಷ ಆರ್ಥಿಕ ಮತ್ತು ಹೂಡಿಕೆ ಪ್ಯಾಕೇಜ್ ಸೇರಿದಂತೆ ಸುಮಾರು 20 ಬೇಡಿಕೆಯ ಮನವಿ ಪತ್ರವನ್ನು ನೀಡಿ, ಇವುಗಳನ್ನು ಆದಷ್ಟು ಬೇಗನೆ ಈಡೇರಿಸುವ ಮೂಲಕ ರಾಯಚೂರು ಜಿಲ್ಲೆಯ ಅಭಿವೃದ್ಧಿಗೆ ಸಹಕಾರ ನೀಡಬೇಕೆಂದರು.

ಈ ವೇಳೆ ಭಾರತ ಸರ್ಕಾರದ ವಾಣಿಜ್ಯ ಇಲಾಖೆಯ ಜಂಟಿ ಕಾರ್ಯದರ್ಶಿಗಳು ಹಾಗೂ ಮಹತ್ವಕಾಂಕ್ಷಿ ಜಿಲ್ಲೆಯ ರಾಯಚೂರಿನ ಕೇಂದ್ರ ಪ್ರಭಾರಿ ಅಧಿಕಾರಿಗಳಾದ ಉಜ್ವಲ ಕುಮಾರ್ ಘೋಷ್ ಅವರು ಮಾತನಾಡಿ, ಸಂಬಂಧಿಸಿದ ಇಲಾಖೆಗಳೊಂದಿಗೆ ಮಾತನಾಡಿ ಮನವಿಗೆ ಸ್ಪಂದಿಸುವುದಾಗಿ ಜಿಲ್ಲಾ ವಾಣಿಜ್ಯೋದ್ಯಮ ಸಂಘದ ವಿವಿಧ ಪದಾಧಿಕಾರಿಗಳಿಗೆ ಹೇಳಿದರು.

ಇದೇ ಸಂದರ್ಭದಲ್ಲಿ ಜಿಲ್ಲಾಧಿಕಾರಿ ಪೂವಿತಾ ಎಸ್., ಜಿಲ್ಲಾ ಪಂಚಾಯತ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಈಶ್ವರ ಕುಮಾರ್ ಕಾಂದೂ, ರಾಯಚೂರು ಮಹಾನಗರ ಪಾಲಿಕೆಯ ಆಯುಕ್ತ ಜುಬಿನ್ ಮೊಹೊಪಾತ್ರ, ಮುಖಂಡರಾದ ಬಸವರಾಜ ಕಳಸ, ತ್ರಿವಿಕ್ರಮ ಜೋಶಿ, ಕಾಟನ್ ಮಿಲ್ಲರ್ಸ್ ಅಸೋಸಿಯೇಷನ್ ಅಧ್ಯಕ್ಷರಾದ ವಿ. ಲಕ್ಷ್ಮೀಕಾಂತರೆಡ್ಡಿ, ಭರತ್ ಚಂದ್, ಶಿಲ್ಪಾ ಮೆಡಿಕೇರ್ ಲಿಮಿಟೆಡ್ ಅಧ್ಯಕ್ಷರಾದ ವಿಷ್ಣುಕಾಂತ ಭುತಡ, ರಾಸಾಯನಿಕ ತಯಾರಿಕ ಸಂಘದ ಅಧ್ಯಕ್ಷರಾದ ಡಾ.ರಮೇಶ, ರೈಸ್ ಮಿಲ್ಲರ್ಸ್ ಅಸೋಸಿಯೇಷನ್ ಅಧ್ಯಕ್ಷರಾದ ಸಾವಿತ್ರಿ ಪುರುಷೋತ್ತಮ, ಅಶೋಕ ಕುಮಾರ್ ಜೈನ್ ಸೇರಿದಂತೆ ಇತರರು ಇದ್ದರು.

# ಮಹತ್ವಾಕಾಂಕ್ಷಿ ಜಿಲ್ಲೆ ಕಾರ್ಯಕ್ರಮಗಳ ಪ್ರಗತಿ ಪರಿಶೀಲನೆ ಸಭೆ

## ಸರ್ಕಾರದ ವಿವಿಧ ಯೋಜನೆಗಳನ್ನು ಫಲಾನುವಿಗಳಿಗೆ ತಲುಪಿಸಿ: ಕೇಂದ್ರ ಜಂಟಿ ಕಾರ್ಯದರ್ಶಿ ಉಜ್ವಲ ಕುಮಾರ್ ಘೋಷ್

ನೈಜ್ಯ ದೆಸೆ ನ್ಯೂಸ್

ರಾಯಚೂರು ಜೂನ್ 08 (ಕರ್ನಾಟಕ ವಾರ್ತೆ): ದೇಶದಲ್ಲಿನ ಮಹತ್ವಾಕಾಂಕ್ಷಿ ಜಿಲ್ಲೆಗಳು ಮತ್ತು ಬ್ಲಾಕ್‌ಗಳಲ್ಲಿ ಸುಸ್ಥಿರ ಅಭಿವೃದ್ಧಿಗೆ ಆದ್ಯತೆ ನೀಡುವ ಮೂಲಕ ಹಿಂದುಳಿದ ಹಣೆಪಟ್ಟಿಯನ್ನು ಕಳಚುವುದು ಮಹತ್ವಾಕಾಂಕ್ಷೆ ಜಿಲ್ಲೆ ಯೋಜನೆಯ ಉದ್ದೇಶವಾಗಿದ್ದು, ಸರ್ಕಾರದ ವಿವಿಧ ಯೋಜನೆಗಳನ್ನು ಅರ್ಹ ಫಲಾನುವಿಗಳಿಗೆ ತಲುಪಿಸಲು ಅಗತ್ಯ ಕ್ರಮ ವಹಿಸಬೇಕೆಂದು ಭಾರತ ಸರ್ಕಾರದ ವಾಣಿಜ್ಯ ಇಲಾಖೆಯ ಜಂಟಿ ಕಾರ್ಯದರ್ಶಿಗಳು ಹಾಗೂ ಮಹತ್ವಕಾಂಕ್ಷಿ ಜಿಲ್ಲೆಯ ರಾಯಚೂರಿನ ಕೇಂದ್ರ ಪ್ರಭಾರಿ ಅಧಿಕಾರಿಗಳಾದ ಉಜ್ವಲ ಕುಮಾರ್ ಘೋಷ್ ಅವರು ಹೇಳಿದರು.

ಜೂನ್ 08ರ ಸೋಮವಾರ ದಂದು ನಗರದ ನೂತನ ಜಿಲ್ಲಾಧಿಕಾರಿಗಳ ಕಚೇರಿಯ ಸಭಾಂಗಣದಲ್ಲಿ ಮಹತ್ವಕಾಂಕ್ಷಿ ಜಿಲ್ಲೆ ಕಾರ್ಯಕ್ರಮಗಳ ಪ್ರಗತಿ ಪರಿಶೀಲನಾ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು. ರಾಜ್ಯದ ಮಹತ್ವಾಕಾಂಕ್ಷೆ ಜಿಲ್ಲೆಯೆಂದು ಗುರುತಿಸಿಕೊಂಡಿರುವ ರಾಯಚೂರಿನ ಸಮಗ್ರ ಅಭಿವೃದ್ಧಿಗೆ ವಿಶೇಷ ಆದ್ಯತೆ ನೀಡುವ ಮೂಲಕ ನಿರೀಕ್ಷಿತ ಗುರಿ ತಲುಪಲಾಗುತ್ತಿದೆ. ಈ ನಿಟ್ಟಿನಲ್ಲಿ ಪ್ರತಿಯೊಬ್ಬ ಅಧಿಕಾರಿಗಳು ಕಾರ್ಯಪ್ರವೃತ್ತರಾಗಬೇಕು. ಕೃಷಿ, ಶಿಕ್ಷಣ, ಆರೋಗ್ಯ, ನೀರಾವರಿ, ಮೂಲಸೌಕರ್ಯ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ, ಕೌಶಲ ಕ್ಷೇತ್ರದಲ್ಲಿ ತೀರಾ ಹಿಂದುಳಿದ ದೇಶದ 112 ಮಹತ್ವಾಕಾಂಕ್ಷಿ ಜಿಲ್ಲೆ ಮತ್ತು 500 ತಾಲ್ಲೂಕುಗಳನ್ನು ಬ್ಲಾಕ್ ಎಂದು ವಿಂಗಡಿಸಿ, ಸುಸ್ಥಿರ ಅಭಿವೃದ್ಧಿಗೆ ಶ್ರಮಿಸಲಾಗುತ್ತಿದೆ ಎಂದರು. ವಿವಿಧ ಸರ್ಕಾರದ ಸಾಲ ಸೌಲಭ್ಯಗಳು, ಯೋಜನೆಗಳು, ಪಿಂಚಣಿಗಳು ಸರಿಯಾಗಿ ಅನುಷ್ಠಾನ ಮಾಡಬೇಕು. ಜಿಲ್ಲೆಯಲ್ಲಿ ಶೇ.100ರಷ್ಟು ಆಧಾರ್



ಜೋಡಣೆ ಮಾಡಬೇಕು. ರಾಯಚೂರು ಜಿಲ್ಲೆಯಲ್ಲಿ ನೀತಿ ಆಯೋಗದ ಎಲ್ಲಾ ಕಾರ್ಯಕ್ರಮಗಳನ್ನು ಅಚ್ಚುಕಟ್ಟಾಗಿ ನಿರ್ವಹಣೆ ಮಾಡಬೇಕು. ಅನುದಾನ ಸರಿಯಾಗಿ ಬಳಕೆ ಮಾಡಿಕೊಳ್ಳಬೇಕು ಎಂದರು.

ಈ ವೇಳೆ ಜಿಲ್ಲಾಧಿಕಾರಿ ಪೂವಿತಾ ಎಸ್. ಅವರು ಮಾತನಾಡಿ, ಪ್ರಧಾನಮಂತ್ರಿಗಳ ವಿಶೇಷ ಕಾರ್ಯಕ್ರಮಗಳಲ್ಲಿ ಒಂದಾದ ಮಹತ್ವಾಕಾಂಕ್ಷೆ ಜಿಲ್ಲೆ ಯೋಜನೆಯಡಿ ಜಿಲ್ಲೆಯಲ್ಲಿ ವಿವಿಧ ಪ್ರಗತಿ ನಡೆದಿದ್ದು, ಸೂಚ್ಯಂಕಗಳಲ್ಲಿ ರಾಯಚೂರು ಜಿಲ್ಲೆ ಉತ್ತಮ ಸ್ಥಾನ ಪಡೆದಿದೆ.ದೇಶದ ಹಿಂದುಳಿದ 112 ಜಿಲ್ಲೆಗಳಲ್ಲಿ ಮಹತ್ವಾಕಾಂಕ್ಷೆ ಜಿಲ್ಲೆ ಯೋಜನೆ 2018ರಲ್ಲಿ ಜಾರಿಗೊಂಡಿದ್ದು, ವಿವಿಧ ಕ್ಷೇತ್ರಗಳಲ್ಲಿ ಜಿಲ್ಲೆಯನ್ನು ಅಭಿವೃದ್ಧಿ ಪಥದಲ್ಲಿ ಸಾಗಿಸುವುದು ಗುರಿಯಾಗಿದೆ. ಜನರ ಆರೋಗ್ಯ ಮತ್ತು ಪೌಷ್ಟಿಕ, ಕೃಷಿ ಮತ್ತು ಜಲ ಸಂಪನ್ಮೂಲ, ಶಿಕ್ಷಣ, ಆರ್ಥಿಕ ಸೇರ್ಪಡೆ ಹಾಗೂ ಕೌಶಲಾಭಿವೃದ್ಧಿ ಮತ್ತು ಮೂಲಸೌಕರ್ಯಗಳಿಗೆ 49 ಸೂಚ್ಯಂಕ ನೀಡಲಾಗಿದ್ದು, ಅವುಗಳನ್ನು ಸರಿಯಾಗಿ ಅನುಷ್ಠಾನ ಮಾಡಬೇಕೆಂದು ಸಂಬಂಧಿಸಿದ ಅಧಿಕಾರಿಗಳಿಗೆ ಸೂಚನೆ ನೀಡಿದರು.

ಈ ವೇಳೆ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಈಶ್ವರ ಕುಮಾರ್ ಕಾಂದೂ ಅವರು ಮಾತನಾಡಿ, ಪೌಸ್ತಿಕ ರಾಯಚೂರಿನಡಿ ತಾಯಂದಿರು, ಮಕ್ಕಳು ಮತ್ತು ಹದಿಹರೆಯದವರ ಆರೋಗ್ಯ ಫಲಿತಾಂಶಗಳನ್ನು ಸುಧಾರಿಸಲು ದತ್ತಾಂಶ ಆಧಾರಿತ ಮಧ್ಯಸ್ಥಿಕೆಗಳ ಮೂಲಕ 250 ದುರ್ಬಲ ಹಳ್ಳಿಗಳನ್ನು ಗುರಿಯಾಗಿಟ್ಟುಕೊಂಡು ಸಮಗ್ರ ಪೋಷಣೆ ಮತ್ತು ಆರೋಗ್ಯ ಉಪಕ್ರಮ ಹಾಗೂ ಸಂಪೂರ್ಣತಾ ಅಭಿಯಾನಡಿ ರೋಗನಿರೋಧಕ ಶಕ್ತಿ, ಎಎನ್.ಸಿ, ಸಾಂಸ್ಥಿಕ ವಿತರಣೆ ಮತ್ತು ಪೌಷ್ಟಿಕಾಂಶ ಸೇವೆಗಳ ಶುದ್ಧತ್ವ, ಲ್ಯಾಬ್ ಮತ್ತು ಅನುಸರಣೆಗಳ ಮೇಲ್ವಿಚಾರಣೆ ಮಾಡಲಾಗುತ್ತಿದೆ ಎಂದರು. ಹೆಚ್.ಆರ್.ಪಿ ಟ್ರ?ಯಾಕಿಂಗ್ ಮತ್ತು ರಾಯಚೂರು, ಮಾನ್ವಿ, ಸಿಂಧನೂರು ಮತ್ತು ಲಿಂಗಸುಗೂರುಗಳಲ್ಲಿ ಸ್ಥಾಪಿಸಲಾದ ಎಮ್.ಸಿ.ಹೆಚ್ ಆಸ್ಪತ್ರೆಗಳಲ್ಲಿ 7020 ಹೆರಿಗೆ ಮಾಡಿಸಲಾಗಿದೆ. ಅಲ್ಲದೆ ಅಂಗನವಾಡಿ ಕೇಂದ್ರಗಳ ಮೂಲಕ ಬೆಳವಣಿಗೆಯ ಮೇಲ್ವಿಚಾರಣೆ ಮತ್ತು ಪೌಷ್ಟಿಕಾಂಶ ಸಮಾಲೋಚನೆ ಕಾಲಕಾಲಕ್ಕೆ ಮಾಡಲಾಗುತ್ತಿದೆ ಎಂದರು.

ಜಿಲ್ಲೆಯಲ್ಲಿ 2011ರ ಜನಸಂಖ್ಯೆ ಪ್ರಕಾರ 19,28,812 ಜನಸಂಖ್ಯೆ ಹೊಂದಿದೆ. ಒಟ್ಟು 8 ತಾಲೂಕುಗಳನ್ನು ಒಳಗೊಂಡಿದೆ. 884 ಕಂದಾಯ ಹಾಗೂ 179 ಗ್ರಾಮ ಪಂಚಾಯತಿಗಳು, 1658 ಶಾಲೆಗಳು, ಒಂದು ಸರ್ಕಾರಿ ಮೆಡಿಕಲ್ ಸಂಸ್ಥೆ, 4 ತಾಲೂಕು ಜನರಲ್ ಆಸ್ಪತ್ರೆ, 6 ಸಮುದಾಯ ಆರೋಗ್ಯ ಕೇಂದ್ರಗಳು, 50 ಪ್ರಾಥಮಿಕ ಆರೋಗ್ಯ ಕೇಂದ್ರ, 6 ಯುಪಿಎಚ್.ಸಿ ಕೇಂದ್ರಗಳ ಜೊತೆಗೆ ಕೃಷಿ ವಿಶ್ವವಿದ್ಯಾಲಯ, ರಾಯಚೂರು ವಿಶ್ವವಿದ್ಯಾಲಯದ ಹಾಗೂ ಐಐಐಟಿ ರಾಯಚೂರಿನಲ್ಲಿ ಕಾರ್ಯ ನಿರ್ವಹಿಸುತ್ತವೆ ಎಂದು ಜಿಲ್ಲಾ ಪಂಚಾಯತ್ ಯೋಜನಾ ನಿರ್ದೇಶಕ ಡಾ.ಟಿ.ರೋಣಿ ಅವರು ಸಭೆಗೆ ಮಾಹಿತಿ ನೀಡಿದರು. ಈ ವೇಳೆ ಸಾರ್ವಜನಿಕ ಶಿಕ್ಷಣ ಇಲಾಖೆಯ ಉಪ ನಿರ್ದೇಶಕ ಮಲ್ಲಿಕಾರ್ಜುನ ಅವರು ಮಾತನಾಡಿ, ಜಿಲ್ಲೆಯ ಜಿಲ್ಲಾಧಿಕಾರಿಗಳು, ಜಿಲ್ಲಾ ಪಂಚಾಯತ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳ ಮಾರ್ಗದರ್ಶನದಲ್ಲಿಜಿಲ್ಲೆಯಲ್ಲಿ 10 ನೇ ತರಗತಿಯ ಫಲಿತಾಂಶಗಳಲ್ಲಿ ಸುಧಾರಣೆಗೆ ಶ್ರಮಿಸಲಾಗಿದೆ.

ರಾಜ್ಯಕ್ಕೆ ರಾಯಚೂರು ಜಿಲ್ಲೆಯು 21ನೇ ಸ್ಥಾನ ಪಡೆದಿದೆ. ಕಾಲಕಾಲಕ್ಕೆ ಶಾಲಾ ತಪಾಸಣೆ ಮತ್ತು ಮನೆ ಮನೆಗೆ ಸಮೀಕ್ಷೆಯ ಮೂಲಕಶಾಲೆಯಿಂದ ಹೊರಗುಳಿದ ಮಕ್ಕಳನ್ನು ಗುರುತಿಸಿ ಪುನರ್ ಶಾಲೆಗೆ ಸೇರಿಸಲು ಸೂಕ್ತ ಕ್ರಮವಹಿಸಲಾಗಿದೆ. ಅಲ್ಲದೆ ಜಿಲ್ಲೆಯಲ್ಲಿ ಶೈಕ್ಷಣಿಕ ಮೇಲ್ವಿಚಾರಣೆ ಮತ್ತು ಉತ್ತಮ ಅಭ್ಯಾಸಕ್ಕಾಗಿ ನೀತಿ ಆಯೋಗದಿಂದ 50 ಶಾಲೆಗಳಲ್ಲಿ ಗ್ರಂಥಾಲಯಗಳನ್ನು ಸ್ಥಾಪನೆ ಮಾಡಲಾಗಿದೆ ಎಂದರು. ಕೃಷಿ ಇಲಾಖೆಯ ಜಂಟಿ ನಿರ್ದೇಶಕ ಪ್ರಕಾಶ್ ಚೌವ್ಹಾಣ್ ಅವರು ಮಾತನಾಡಿ, 2026ರ ಮಾರ್ಚ್ 26ರವಗೆ ಜಿಲ್ಲೆಯಲ್ಲಿ 17,138 ಮಣ್ಣಿನ ಆರೋಗ್ಯ ಕಾರ್ಡ್ಗಳು ವಿತರಿಸಲಾಗಿದೆ. ನರೇಗಾ ಯೋಜನೆಯಡಿ 10,794 ಜಲಮೂಲಗಳನ್ನು ಪುನರುಜ್ಜೀವನಗೊಳಿಸಲಾಗಿದೆ. ಅಲ್ಲದೆ ಜಿಲ್ಲೆಯಲ್ಲಿ 6 ಎಲೆಕ್ಟ್ರಾನಿಕ್ ಮಾರುಕಟ್ಟೆಗೆ ಸಂಪರ್ಕ ಹೊಂದಿವೆ ಎಂದು ಸಭೆಗೆ ಮಾಹಿತಿ ನೀಡಿದರು.

ಹನಿ ಮತ್ತು ತುಂತುರು ನೀರಾವರಿ, ನೀರು ಉಳಿಸುವ ತಂತ್ರಜ್ಞಾನಗಳ ಅಳವಡಿಕೆ ಕುರಿತು ರೈತರಿಗೆ ಜಾಗೃತಿ ಅಭಿಯಾನಗಳನ್ನು ಹಮ್ಮಿಕೊಳ್ಳಲಾಗಿದೆ. ಕಾಲುವೆ ನೀರಾವರಿ ವ್ಯವಸ್ಥೆಗಳ ಸುಧಾರಿತ ಬಳಕೆ ಹಾಗೂ ರೈತರಿಗೆ ನಿಯಮಿತ ರೈತ ತರಬೇತಿಗಳು, ಪ್ರಾತ್ಯಕ್ಷಿಕೆಗಳನ್ನು ಹಮ್ಮಿಕೊಳ್ಳಲಾಗಿದೆ. ಜಿಲ್ಲೆಯಲ್ಲಿ ಪ್ರಾಣಿಗಳಿಗೆ ಶೇ.100ರಷ್ಟು ಲಸಿಕೆ ಹಾಕಲಾಗಿದೆ ಎಂದರು.ನೀತಿ ಆಯೋಗದಿಂದ ರಾಯಚೂರು ಜಿಲ್ಲೆಯ ವಿವಿಧ ತಾಲೂಕುಗಳಲ್ಲಿನ 24 ಜಲಮೂಲಗಳ ಪುನರುಜ್ಜೀವನ ನೀಡಲಾಗಿದೆ ಎಂದು ಸಭೆಗೆ ಕೃಷಿ ಇಲಾಖೆಯ ಜಂಟಿ ನಿರ್ದೇಶಕರು ತಿಳಿಸಿದರು.

ಇದೇ ಸಂದರ್ಭದಲ್ಲಿ ರಾಯಚೂರು ಮಹಾನಗರ ಪಾಲಿಕೆಯ ಆಯುಕ್ತ ಜುಬಿನ್ ಮೊಹೊಪಾತ್ರ, ರಾಯಚೂರು ಸಹಾಯಕ ಆಯುಕ್ತ ಡಾ.ಹಂಪಣ್ಣ ಸಜ್ಜನ್, ಜಿಲ್ಲಾ ಪಂಚಾಯತ ಮುಖ್ಯ ಯೋಜನಾ ನಿರ್ದೇಶಕ ಶರಣಬಸರಾಜ, ರಾಯಚೂರು ನಗರಾಭಿವೃದ್ಧಿ ಪ್ರಾಧಿಕಾರದ ಯೋಜನಾ ನಿರ್ದೇಶಕ ತಿಮ್ಮಪ್ಪ ಬಿರಾದಾರ್, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಅಧಿಕಾರಿ ಡಾ.ಸುರೇಂದ್ರ ಬಾಬು, ಪದವಿ ಪೂರ್ವ ಶಿಕ್ಷಣ ಇಲಾಖೆಯ ಉಪ ನಿರ್ದೇಶಕ ಸೋಮಶೇಖರಪ್ಪ ಹೊಕ್ರಾಣಿ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಉಪ ನಿರ್ದೇಶಕಿ ಶರಣಮ್ಮ,ಜಿಲ್ಲಾ ಆರ್.ಸಿ.ಹೆಚ್. ಅಧಿಕಾರಿ ಡಾ.ನಂದಿತಾ, ಆಹಾರ ಇಲಾಖೆಯ ಉಪ ನಿರ್ದೇಶಕ ನಜೀರ್ ಅಹಮದ್, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ಸಹಾಯಕ ನಿರ್ದೇಶಕ ವಿರೇಶ ನಾಯಕ ಸೇರಿದಂತೆ ವಿವಿಧ ಇಲಾಖೆಯ ಅಧಿಕಾರಿಗಳು ಸಭೆಯಲ್ಲಿ ಇದ್ದರು.

## ಶಿಕ್ಷಣ ಮಾರ್ಗದರ್ಶಿ ವಿಶೇಷ

### ಫೌಂಡ್ರಿಮನ್ (Foundryman)

ವೃತ್ತಿಯ ಒಂದು ವರ್ಷದ ತರಬೇತಿಯ

ಫೌಂಡ್ರಿಮನ್ ವೃತ್ತಿಯ ಒಂದು ವರ್ಷದ ತರಬೇತಿ ಅವಧಿಯಲ್ಲಿ ತರಬೇತಿದಾರರಿಗೆ ಉದ್ಯೋಗ ಸಂಬಂಧಿತ ವೃತ್ತಿಪರ ಕೌಶಲ್ಯ (Professional Skill), ವೃತ್ತಿಪರ ಜ್ಞಾನ (Professional Knowledge) ಹಾಗೂ ಉದ್ಯೋಗಾರ್ಹತಾ ಕೌಶಲ್ಯಗಳು (Employability Skills) ವಿಷಯಗಳಲ್ಲಿ ತರಬೇತಿ ನೀಡಲಾಗುತ್ತದೆ. ಇದರ ಜೊತೆಗೆ ತರಬೇತಿದಾರರಿಗೆ ಆತ್ಮವಿಶ್ವಾಸ ವೃದ್ಧಿಗಾಗಿ ಯೋಜನಾ ಕಾರ್ಯಗಳು (Project Work) ಹಾಗೂ ಪಠ್ಯೇತರ ಚಟುವಟಿಕೆಗಳು (Extra Curricular Activities) ನೀಡಲಾಗುತ್ತದೆ. ಪ್ರಾಯೋಗಿಕ ಕೌಶಲ್ಯಗಳನ್ನು ಸರಳ ಹಂತದಿಂದ ಸಂಕೀರ್ಣ ಹಂತದವರೆಗೆ ಕ್ರಮಬದ್ಧವಾಗಿ ಕಲಿಸಲಾಗುತ್ತದೆ. ಅದೇ ರೀತಿ ಸೈದ್ಧಾಂತಿಕ ವಿಷಯಗಳನ್ನು ಸಹ ಕಲಿಸಿ, ಕಾರ್ಯನಿರ್ವಹಣೆಯ ವೇಳೆ ಜ್ಞಾನವನ್ನು ಪರಿಣಾಮಕಾರಿಯಾಗಿ ಬಳಸುವಂತೆ ಮಾಡಲಾಗುತ್ತದೆ.

ಈ ತರಬೇತಿಯು ಫೌಂಡ್ರಿ ಉದ್ಯಮದಲ್ಲಿ ಅಗತ್ಯವಿರುವ ಎರಕ (Casting) ತಯಾರಿಕೆಯ ಎಲ್ಲಾ ಪ್ರಮುಖ ಕೌಶಲ್ಯಗಳನ್ನು ಒಳಗೊಂಡಿದೆ. ತರಬೇತಿಯಲ್ಲಿ ಸಾಮಾನ್ಯ ಸುರಕ್ಷತಾ ಕ್ರಮಗಳಿಂದ ಹಿಡಿದು ವೃತ್ತಿಗೆ ಸಂಬಂಧಿಸಿದ ವಿಶೇಷ ಸುರಕ್ಷತಾ ಕ್ರಮಗಳವರೆಗೆ ಕಲಿಸಲಾಗುತ್ತದೆ. ಎರಕ ಕಾರ್ಯಗಳಲ್ಲಿ ಬಳಸುವ ಉಪಕರಣಗಳು, ಯಂತ್ರೋಪಕರಣಗಳು ಹಾಗೂ ಕಚ್ಚಾ ವಸ್ತುಗಳ ಪರಿಚಯ ನೀಡಲಾಗುತ್ತದೆ. ನಂತರ ಮರಳು ಜರಡಿ (Sand Sieving), ಮರಳು ಮಿಶ್ರಣ (Sand Mixing) ಮತ್ತು ಮರಳು ಪರೀಕ್ಷೆ (Sand Testing) ಬಗ್ಗೆ ತರಬೇತಿ ನೀಡಲಾಗುತ್ತದೆ.ಇದಲ್ಲದೆ ರ್ಯಾಮಿಂಗ್ (Ramming), ಚಾನೆಲ್ ಕತ್ತರಿಸುವುದು (Channel Cutting), ಮರಳು ಸಿದ್ಧಪಡಿಸುವುದು, ಬ್ಯಾಕಿಂಗ್ (Backing) ಮತ್ತು ಗೇಟ್ ಕತ್ತರಿಸುವಿಕೆ (Gate Cutting) ಮುಂತಾದ ಕಾರ್ಯಗಳನ್ನು ಕಲಿಸಲಾಗುತ್ತದೆ.

ಕೋರ್ ತಯಾರಿಕೆ (Core Making), ಹಸಿರು ಮರಳು ಅಚ್ಚು (Green Sand Mould) ತಯಾರಿಕೆ, ನೆಲ ಸಮತಟ್ಟು ಮಾಡುವುದು, ಅಚ್ಚಿನಲ್ಲಿ ಬೆಡಿಂಗ್ (Bedding) ಮಾಡುವುದು, ವಿವಿಧ ಕೋರ್‌ಗಳೊಂದಿಗೆ ಅಚ್ಚು ತಯಾರಿಸುವುದು ಹಾಗೂ ವಿವಿಧ ಉಪಕರಣಗಳಿಗೆ ಅನುಗುಣವಾಗಿ ಅಚ್ಚುಗಳನ್ನು ಸಿದ್ಧಪಡಿಸುವುದು ತರಬೇತಿಯ ಭಾಗವಾಗಿರುತ್ತದೆ.

ಮರಗೆಲಸದ ಮೂಲಕ ವಿವಿಧ ಮಾದರಿಗಳನ್ನು (Patterns) ತಯಾರಿಸುವ ಕೌಶಲ್ಯಗಳನ್ನೂ ಕಲಿಸಲಾಗುತ್ತದೆ. ಲೋಹದ ಕೆಲಸಗಳಾದ ಚಿಪ್ಪಿಂಗ್ (Chipping), ಫೈಲಿಂಗ್ (Filing), ಗ್ರೈಂಡಿಂಗ್ (Grinding), ಡ್ರಿಲ್ಲಿಂಗ್ (Drilling) ಮುಂತಾದ ಕಾರ್ಯಗಳ ತರಬೇತಿಯೂ ನೀಡಲಾಗುತ್ತದೆ. ಕೊನೆಯಲ್ಲಿ ಇಂಡಕ್ಷನ್ ಭಟ್ಟಿಯಲ್ಲಿ (Induction Furnace) ಲೋಹ ಕರಗಿಸುವ ಪ್ರಾಯೋಗಿಕ ತರಬೇತಿ ನೀಡಲಾಗುತ್ತದೆ.

ಲೋಮ್ ಸ್ಯಾಂಡ್ ಮೋಲ್ಡ್ (Loam Sand Mould), ಪಿಟ್ ಮೋಲ್ಡ್ (Pit Mould), CO? ಮೋಲ್ಡ್ (CO? Mould) ಮುಂತಾದ ವಿವಿಧ ಅಚ್ಚುಗಳ ತಯಾರಿಕೆ ಹಾಗೂ ಎರಕ ಕಾರ್ಯಗಳನ್ನು ಆರಂಭದಲ್ಲಿಯೇ ಕಲಿಸಲಾಗುತ್ತದೆ. ಸಮತೋಲನ ಕೋರ್ (Balancing Core), ತೂಗು ಕೋರ್ (Hanging Core) ಮುಂತಾದ ವಿವಿಧ ಕೋರ್‌ಗಳ ಅಳವಡಿಕೆಯಿಂದ ಅಚ್ಚು ತಯಾರಿಸುವುದು ಮತ್ತು ವಿವಿಧ ಲೋಹಗಳ ಎರಕ ಕಾರ್ಯಗಳನ್ನು ನಡೆಸುವುದು ತರಬೇತಿಯ ಭಾಗವಾಗಿರುತ್ತದೆ.

ವಿದ್ಯಾರ್ಹತೆ 10 ನೇ ತರಗತಿ ಉತ್ತೀರ್ಣ..

## ಕಚ್ಚಾ ತೈಲ ದರ ಏರಿಕೆ

❑ ನೈಜ್ಯ ದೆಸೆ ನ್ಯೂಸ್

**ನವದೆಹಲಿ: ಅಂತಾರಾಷ್ಟ್ರೀಯ ಮಾರುಕಟ್ಟೆಯಲ್ಲಿ ಕಚ್ಚಾ ತೈಲದ ದರ ಶೇ,2.32 ರಷ್ಟು ಏರಿಕೆಯಾಗಿದೆ. ಇದರಿಂದಾಗಿ ಪೆಟ್ರೋಲ್– ಡೀಸೆಲ್ ದರ ಹೆಚ್ಚಳವಾಗುವ ಸಾಧ್ಯತೆಯಿದೆ.**



ಇರಾನ್ ಮತ್ತು ಇಸ್ರೇಲ್ ನಡುವೆ ದಾಳಿ ಪ್ರತಿ ದಾಳಿ ಆರಂಭವಾಗಿದ್ದು ಮತ್ತೆ ಯುದ್ಧದ ಕಾರ್ಮೋಡ ಕವಿದಿರುವ ಹಿನ್ನೆಲೆಯಲ್ಲಿ ಕಚ್ಚಾ ತೈಲ ದರಗಳು ಏರಿಕೆ ಕಂಡಿವೆ. ಎರಡೂ ದೇಶಗಳ ನಡುವೆ ಕದನ ವಿರಾಮ ಜಾರಿಯಲ್ಲಿರುವಾಗಲೇ ಇಸ್ರೇಲ್ ಲೆಬನಾನ್ ಮೇಲೆ ಹೊಸ ದಾಳಿಗಳನ್ನು ನಡೆಸಿದ ನಂತರ ಸೋಮವಾರ ತೈಲ ಬೆಲೆಗಳು ಬ್ಯಾರೆಲ್‌ಗೆ $2 ಕ್ಕಿಂತ ಹೆಚ್ಚು ಏರಿಕೆಯಾಗಿವೆ. ಇದು ವ್ಯಾಪಕ ಯುದ್ಧವನ್ನು ಕೊನೆಗೊಳಿಸುವ ಮತ್ತು ಹಾರ್ಮುಜ್ ಜಲಸಂಧಿಯ ಮೂಲಕ ಕಚ್ಚಾ ತೈಲದ ಹರಿವನ್ನು ಪುನರಾರಂಭಿಸುವ ಭರವಸೆಯನ್ನು ಹುಸಿಗೊಳಿಸಿದೆ. ಯುಎಸ್ ಕಚ್ಚಾ ತೈಲದ ಬೆಲೆಗಳು ಬ್ಯಾರೆಲ್‌ಗೆ $2.10 ಅಥವಾ 2.32% ರಷ್ಟು ಏರಿಕೆಯಾಗಿ $92.64 ಕ್ಕೆ ತಲುಪಿದವು.

# ಉಜ್ವಲ ಕುಮಾರ್ ಘೋಷ್ ಅವರಿಂದ ಗಬ್ಬೂರು, ಮಸರಕಲ್ ಗ್ರಾಮದ ವಿವಿಧೆಡೆ ಭೇಟಿ ಪರಿಶೀಲನೆ

❑ ನೈಜ್ಯ ದೆಸೆ ನ್ಯೂಸ್

**ರಾಯಚೂರು ಜೂನ್ 08 (ಕರ್ನಾಟಕ ವಾರ್ತೆ): ಮಹತ್ವಕಾಂಕ್ಷಿ ಜಿಲ್ಲೆ ಕಾರ್ಯಕ್ರಮಗಳ ಪ್ರಗತಿ ಪರಿಶೀಲನಾ ಸಭೆಯ ನಂತರ ಜಿಲ್ಲೆಯ ದೇವದುರ್ಗ ತಾಲ್ಲೂಕಿನ ಗಬ್ಬೂರು ಗ್ರಾಮದ ಕಡೆ ಪ್ರಯಾಣ ಬೆಳೆಸಿ, ಗಬ್ಬೂರಿನ ಅಂಗನವಾಡಿ ಕೇಂದ್ರ ಸಂಖ್ಯೆ 07ಕ್ಕೆ ಭಾರತ ಸರ್ಕಾರದ ವಾಣಿಜ್ಯ ಇಲಾಖೆಯ ಜಂಟಿ ಕಾರ್ಯದರ್ಶಿಗಳು ಹಾಗೂ ಮಹತ್ವಕಾಂಕ್ಷಿ ಜಿಲ್ಲೆಯ ರಾಯಚೂರಿನ ಕೇಂದ್ರ ಪ್ರಭಾರಿ ಅಧಿಕಾರಿಗಳಾದ ಉಜ್ವಲ ಕುಮಾರ್ ಘೋಷ್ ಅವರು ಜೂನ್ 08ರ ಸೋಮವಾರ ದಂದು ಭೇಟಿ ನೀಡಿ, ಪರಿಶೀಲನೆ ಮಾಡಿದರು.**



ಅಂಗನವಾಡಿಯ ಸುತ್ತಮುತ್ತಲಿನ ಪರಿಸರ, ಮಕ್ಕಳ ತರಗತಿ ಗೃಹ, ಅಡುಗೆ ಕೋಣೆ, ದಾಸ್ತಾನು ಕೊಠಡಿಗಳಿಗೆ ತೆರಳಿ ಅಲ್ಲಿನ ವ್ಯವಸ್ಥೆಗಳ ಬಗ್ಗೆ ಪರಿಶೀಲನೆ ನಡೆಸಿದರು. ಅಂಗನವಾಡಿ ಕಾರ್ಯಕರ್ತೆ ಹಾಗೂ ಸಹಾಯಕರಿಗೆ ಕಟ್ಟಡದ ಸುತ್ತಮುತ್ತಲಿನ ಪರಿಸರವನ್ನು ಉತ್ತಮವಾಗಿ ಇಟ್ಟುಕೊಳ್ಳುವಂತೆ ಸೂಚನೆ ನೀಡಿದರು. ಇತ್ತೀಚಿನ ಮಳೆಯಿಂದಾಗಿ ಸೊಳ್ಳೆಗಳು ಉತ್ಪತ್ತಿಯಾಗುವ ಸಾಧ್ಯತೆ ಇರುತ್ತದೆ. ಸೊಳ್ಳೆಗಳು ಕಚ್ಚುವುದರಿಂದ ಮಕ್ಕಳಿಗೆ ರೋಗ–ರುಜಿನಗಳು ಬರುವ ಸಾಧ್ಯತೆ ಇರುತ್ತದೆ ಈ ಬಗ್ಗೆ ಎಚ್ಚರಿಕೆ ವಹಿಸಬೇಕು ಎಂದರು.

ಪ್ರಸಕ್ತ ದಿನಗಳಲ್ಲಿ ವಿದ್ಯಾರ್ಥಿಗಳಿಗೆ ನೀಡುತ್ತಿರುವ ಆಹಾರ, ಉತ್ಪನ್ನಗಳ ಬಗ್ಗೆ ಮಾಹಿತಿ ಪಡೆದ ಅವರು, ಉತ್ತಮ ಗುಣಮಟ್ಟದ ಆಹಾರ ವಿತರಣೆಗೆ ಸೂಚನೆ ನೀಡಿದರು. ಮಕ್ಕಳಿಗೆ ನೀಡುತ್ತಿರುವ ಆಟಿಕೆ ವಸ್ತುಗಳನ್ನು ಖುದ್ದಾಗಿ ಪರಿಶೀಲಿಸಿದರು. ನಂತರ ಗ್ರಾಮದ ಪ್ರಾಥಮಿಕ ಆರೋಗ್ಯ ಕೇಂದ್ರಕ್ಕೆ ಭೇಟಿ ನೀಡಿ, ಅಲ್ಲಿನ ವ್ಯವಸ್ಥೆಯನ್ನು ಪರಿಶೀಲಿಸಿದರು. ಆಸ್ಪತ್ರೆಯ ಸ್ವಚ್ಛತೆ, ರೋಗಿಗಳಿಗೆ ನೀಡುವ ಚಿಕಿತ್ಸೆ, ತುರ್ತು ಚಿಕಿತ್ಸಾ ಘಟಕದಲ್ಲಿ ಪರಿಶೀಲನೆ ನಡೆಸಿದರು. ಆಸ್ಪತ್ರೆಯಲ್ಲಿ ಸಿಗುವ ಸೌಲಭ್ಯಗಳ ಕುರಿತು ಇಲಾಖೆಯ ಅಧಿಕಾರಿಗಳೊಂದಿಗೆ ಚರ್ಚಿಸಿದರು. ನಂತರ ಸೂಚಿ ಮಾಡುವ ಕೊಠಡಿ, ಮೆಡಿಕಲ್ ಆಫೀಸರ್ ಕೊಠಡಿ, ಪ್ರಯೋಗಾಲಯ ಕೊಠಡಿ, ಮುಖ್ಯ ಔಷಧ ಉಗ್ರಾಣಕ್ಕೆ ಭೇಟಿ ನೀಡಿ ಪರಿಶೀಲನೆ ಮಾಡಿ, ಆಸ್ಪತ್ರೆಗೆ ಸಿಬ್ಬಂದಿಗಳ ಕೊರತೆಯಾಗದಂತೆ ನೋಡಿಕೊಳ್ಳಬೇಕು ಎಂದು ಸಂಬಂಧಿಸಿದ ಇಲಾಖೆಯ ಅಧಿಕಾರಿಗಳಿಗೆ ಸೂಚನೆ ನೀಡಿದರು.

ಆಶಾ ಕಾರ್ಯಕರ್ತೆ ಗರ್ಭಿಣಿಯರಿಗೆ ಕಾಲಕಾಲಕ್ಕೆ ಲಸಿಕೆ ಕೊಡಿಸಬೇಕು. ಸರ್ಕಾರದ ಸೌಲಭ್ಯಗಳ ಕುರಿತು ಸಾರ್ವಜನಿಕರಿಗೆ ಜಾಗೃತಿ ಮೂಡಿಸಬೇಕು. ಆಶಾ ಕಾರ್ಯಕರ್ತೆಯರ ಬಾಕಿ ವೇತನವನ್ನು ಕೂಡಲೇ ಬಿಡುಗಡೆ ಮಾಡುವಂತೆ ಸಂಬಂಧಿಸಿದ ಇಲಾಖೆಯ ಅಧಿಕಾರಿಗಳಿಗೆ ಸೂಚಿಸಿದರು. ಇದಕ್ಕೂ ಮುಂಚೆ ಗಬ್ಬೂರಿನ ನಾಡ ಕಚೇರಿಗೆ ಭೇಟಿ ನೀಡಿದರು. ನಂತರ ಜಿಲ್ಲೆಯ ದೇವದುರ್ಗ ತಾಲ್ಲೂಕಿನ ಮಸರಕಲ್ ಗ್ರಾಮದ ಶಕ್ತಿ ವೀಟಾ ಕೇಂದ್ರಕ್ಕೆ ಭೇಟಿ ನೀಡಿ, ಪರಿಶೀಲನೆ ಮಾಡಿದರು.

ಕೇಂದ್ರದ ಶೇಖರಣಾ ವಿಭಾಗ, ತಯಾರಿಕಾ ವಿಭಾಗ ಸೇರಿದಂತೆ ವಿವಿಧ ವಿಭಾಗವನ್ನು ವೀಕ್ಷಣೆ ಮಾಡಿ, ಆಹಾರ ತಯಾರಿಕೆ ಯಂತ್ರಗಳ ಕುರಿತು ಮಾಹಿತಿ ಪಡೆದರು. ಇದೇ ಸಂದರ್ಭದಲ್ಲಿ ಜಿಲ್ಲಾ ಪಂಚಾಯತ ಯೋಜನಾ ನಿರ್ದೇಶಕ ಡಾ.ಟಿ.ರೋಣಿ, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಅಧಿಕಾರಿ ಡಾ.ಸುರೇಂದ್ರ ಬಾಬು, ದೇವದುರ್ಗ ತಹಶಿಲ್ದಾರ್ ನಾಗಮ್ಮ ಕಟ್ಟಿಮನಿ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಉಪ ನಿರ್ದೇಶಕಿ ಶರಣಮ್ಮ, ಜಿಲ್ಲಾ ಆರ್.ಸಿ.ಹೆಚ್ ಅಧಿಕಾರಿ ಡಾ.ನಂದಿತಾ ಎಮ್.ಎನ್., ದೇವದುರ್ಗ ತಾಲೂಕು ಆರೋಗ್ಯಾಧಿಕಾರಿ ಡಾ.ಬನದೇಶ್ವರ, ದೇವದುರ್ಗ ಸಿಡಿಪಿಒ ಮಹೇಶ್ ಸೇರಿದಂತೆ ವಿವಿಧ ಇಲಾಖೆಯ ಅಧಿಕಾರಿಗಳು, ಸಿಬ್ಬಂದಿಗಳು ಇದ್ದರು.

# ಸಿಂಧನೂರಿನ ಅಭಿವೃದ್ಧಿಗೆ ಮತ್ತೊಂದು ಮಹತ್ವದ ಹೆಜ್ಜೆ!

❑ ನೈಜ್ಯ ದೆಸೆ ನ್ಯೂಸ್

**ಸಿಂಧನೂರು: ಪಿಡಬ್ಲ್ಯೂಡಿ ಕ್ಯಾಂಪಿನಿಂದ ರಾಯಚೂರಿನ 7ನೇ ಮೈಲ್‌ವರೆಗಿನ ಚತುಸ್ಪಥ ಹೆದ್ದಾರಿ ಕಾಮಗಾರಿಯನ್ನು ಶಾಸಕ ಶ್ರೀ ಹಂಪನಗೌಡ ಬಾದರ್ಲಿ ಅವರು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲಿಸಿದರು.**



ಈ ವೇಳೆ ಅಧಿಕಾರಿಗಳೊಂದಿಗೆ ಚರ್ಚಿಸಿದ ಅವರು, ನಗರದ ಪ್ರಮುಖ ಗುರುತಾಗಿರುವ ಡಾ. ಬಿ.ಆರ್. ಅಂಬೇಡ್ಕರ್ ವೃತ್ತವನ್ನು ಆಕರ್ಷಕವಾಗಿ, ಆಧುನಿಕ ಸೌಲಭ್ಯಗಳೊಂದಿಗೆ ಹಾಗೂ ಸಾರ್ವಜನಿಕರಿಗೆ ಅನುಕೂಲಕರವಾಗುವ ರೀತಿಯಲ್ಲಿ ಅಭಿವೃದ್ಧಿಪಡಿಸುವಂತೆ ಸೂಚನೆ ನೀಡಿದರು. ಗುಣಮಟ್ಟದ ರಸ್ತೆ, ಸುಸಜ್ಜಿತ ಸಂಚಾರ ವ್ಯವಸ್ಥೆ ಹಾಗೂ ಉತ್ತಮ ಮೂಲಸೌಕರ್ಯಗಳ ಮೂಲಕ ಸಿಂಧನೂರನ್ನು ಮಾದರಿ ನಗರವನ್ನಾಗಿಸುವ ಸಂಕಲ್ಪದೊಂದಿಗೆ ಕಾಮಗಾರಿಗಳನ್ನು ವೇಗಗೊಳಿಸುವಂತೆ ಅಧಿಕಾರಿಗಳಿಗೆ ನಿರ್ದೇಶನ ನೀಡಿದರು.

ನಗರದ ಸಮಗ್ರ ಅಭಿವೃದ್ಧಿ, ಸುಗಮ ಸಂಚಾರ, ವ್ಯಾಪಾರ–ವಹಿವಾಟಿನ ವೃದ್ಧಿ ಹಾಗೂ ಸಾರ್ವಜನಿಕರ ಸುರಕ್ಷತೆಯನ್ನು ಗಮನದಲ್ಲಿಟ್ಟುಕೊಂಡು ಕಾಮಗಾರಿ ನಿಗದಿತ ಅವಧಿಯೊಳಗೆ ಪೂರ್ಣಗೊಳ್ಳಬೇಕು ಎಂದು ತಿಳಿಸಿದರು. ಅಭಿವೃದ್ಧಿಯ ಮೂಲಕ ಜನರ ಜೀವನಮಟ್ಟವನ್ನು ಮತ್ತಷ್ಟು ಉತ್ತಮಗೊಳಿಸುವುದು ಸರ್ಕಾರದ ಪ್ರಮುಖ ಆದ್ಯತೆಯಾಗಿದೆ ಎಂದು ಹೇಳಿದರು.

ಈ ಸಂದರ್ಭದಲ್ಲಿ ಏಖಆ– ಅಐ ಇಇ ಮುರಳಿಧರನ್, ಎಇ ಅಶೋಕ್, ಡಿವೈಎಸ್‌ಪಿ ಚಂದ್ರಶೇಖರ್, ಪಿಐ ವೀರರೆಡ್ಡಿ, ಸಿಪಿಐ ವಿನಾಯಕ, ನಗರಸಭೆ ಎಇ ಮಾದೇವ್ ಪ್ರವೀಣ್, ಮುಖಂಡರಾದ ಛತ್ರಪ್ಪ ಕುರುಕುಂದಿ, ಕಾಂಗ್ರೆಸ್ ಪಕ್ಷದ ನಗರ ಘಟಕದ ಅಧ್ಯಕ್ಷ ಖಾಜಿ ಮಲೀಕ್ ವಕೀಲರು, ಪ್ರಧಾನ ಕಾರ್ಯದರ್ಶಿ ಅನಿಲ್ ಕುಮಾರ್ ವೈ ಸೇರಿದಂತೆ ಹಲವರು ಉಪಸ್ಥಿತರಿದ್ದರು. “ಅಭಿವೃದ್ಧಿಯೇ ನಮ್ಮ ಗುರಿ ? ಜನಸೇವೆಯೇ ನಮ್ಮ ಧ್ಯೇಯ.”

# ಡಿಕೆಶಿ ಸಂಪುಟದಲ್ಲಿ ಮುಂದುವರೆದ ಖಾತೆ ಕಿರಿಕ್

❑ ನೈಜ್ಯ ದೆಸೆ ನ್ಯೂಸ್

**ಬೆಂಗಳೂರು: ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಸಂಪುಟದಲ್ಲಿ ಖಾತೆ ಹಂಚಿಕೆ ವಿಚಾರವಾಗಿರುವ ಅಸಮಧಾನ ಮತ್ತೂ ಮುಂದುವರೆದಿದೆ. ಬೆಂಗಳೂರು ನಗರಾಭಿವೃದ್ಧಿ ಖಾತೆ ಪಡೆದಿರುವ ಸಚಿವ ಕೃಷ್ಣ ಬೈರೇಗೌಡ, ಬಿ ಎಂ ಆರ್ ಡಿ ಮತ್ತು ಬಿಡಿಎ ಒಳಗೊಂಡಂತೆ ಬೆಂಗಳೂರಿನ ಸಮಗ್ರ ಜವಾಬ್ದಾರಿ ನೀಡಬೇಕು ಎಂದು ಒತ್ತಾಯಿಸಿರುವುದಾಗಿ ತಿಳಿದು ಬಂದಿದೆ.**

ಸಚಿವ ರಾಮಲಿಂಗಾ ರೆಡ್ಡಿ ತಮಗೆ ನೀಡಿರುವ ಜಲಸಂಪನೂಲ ಖಾತೆ ಬೇಡ. ಬೆಂಗಳೂರು ನಗರಾಭಿವೃದ್ಧಿ ಬೇಕು ಎಂದು ಪಟ್ಟು ಹಿಡಿದು ರಾಜೀನಾಮೆ ನೀಡಿದ್ದರು. ಎಐಸಿಸಿ ಪ್ರಧಾನ ಕಾರ್ಯದರ್ಶಿ ರಣದೀಪ್ ಸಿಂಗ್ ಸುರ್ಜೇವಾಲ, ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ, ಕೆಪಿಸಿಸಿ ಅಧ್ಯಕ್ಷ ಬಿ.ಕೆ. ಹರಿಪ್ರಸಾದ್ ಸೇರಿದಂತೆ ಅನೇಕರು ರಾಮಲಿಂಗಾ ರೆಡ್ಡಿ ಅವರ ಮನವೋಲಿಸಿದ್ದರು. ತಾವು ಕೊಟ್ಟ ರಾಜೀನಾಮೆ ಅಂಗೀಕಾರವಾಗದೆ ತಿರಸ್ಕಾರವಾಗಿದೆ ಎಂದು ರಾಮಲಿಂಗಾ ರೆಡ್ಡಿ ಹೇಳಿಕೆ ನೀಡಿ ತಮ ಪಾಡಿಗೆ ತಾವಿದ್ದಾರೆ. ಬೆಂಗಳೂರು ನಗರಾಭಿವೃದ್ಧಿ ಖಾತೆ ನೀಡುವ ಬಗ್ಗೆ ಸೂಕ್ತ ಸಮಯದಲ್ಲಿ ನಿರ್ಧಾರ ತೆಗೆದುಕೊಳ್ಳುವುದಾಗಿ ಹೈಕಮಾಂಡ್ ಮತ್ತು ಮುಖ್ಯಮಂತ್ರಿ ಭರವಸೆ ನೀಡಿದ್ದಾರೆ. ಅಲ್ಲಿಗೆ ಎಲ್ಲವೂ ಬಗೆ ಹರಿದಿದೆ ಎಂದು ಮಾಧ್ಯಮಗಳು ಭಾವಿಸಿಕೊಳ್ಳಬಹುದು ಎಂದು ಮುಗುಮಾಗಿ ಹೇಳಿದ್ದಾರೆ.

ಈ ನಡುವೆ ಬೆಂಗಳೂರು ನಗರಾಭಿವೃದ್ಧಿ ಖಾತೆ ಪಡೆದಿರುವ ಕೃಷ್ಣ ಬೈರೇಗೌಡ ಈವರೆಗೂ ಇಲಾಖೆಯ ಪ್ರ–ರಿಚಯಾತಕ ಸಭೆ ನಡೆಸಿಲ್ಲ. ತಮಗೆ ಇದೇ ಖಾತೆ ಇರಲಿದೆಯೇ ಅಥವಾ ಬದಲಾಗಲಿದೆಯೇ ಎಂಬ ಗೊಂದಲದಲ್ಲಿ ಇದ್ದಂತಿದೆ. ರಾಮಲಿಂಗಾ ರೆಡ್ಡಿ ಅವರ ಹಠ ಪಕ್ಷದ ಹಿರಿಯ ನಾಯಕರಲ್ಲಿ ಅಸ್ಪಷ್ಟತೆಯ ವಾತಾವರಣ ನಿರ್ಮಿಸಿದೆ.



ಸಚಿವ ಕೃಷ್ಣ ಬೈರೇಗೌಡ ಅವ–ರಿಗೆ ಗ್ರೆಟರ್ ಬೆಂಗಳೂರು ನಗರಾಭಿವೃದ್ಧಿಯಲ್ಲಿ ಐದು ಮಹಾನಗರ ಪಾಲಿಕೆಗಳ ಜವಾಬ್ದಾ–ರಿಯನ್ನು ವಹಿಸಲಾಗಿದೆ. ಪ್ರಮುಖವಾಗಿ ಬಿಡಿಎ ಮತ್ತು ಬಿಎಂಆರ್‌ಡಿ ಜವಾಬ್ದಾ–ರಿಗಳನ್ನು ಮುಖ್ಯಮಂತ್ರಿಯವರು ತಮ ಬಳಿಯೇ ಇರಿಸಿಕೊಂಡಿದ್ದಾರೆ. ಬಿಡಿಎ ನಲ್ಲಿ ಸಾವಿರಾರು ಕೋಟಿ ರೂಪಾಯಿಗಳ ಕಾಮಗಾರಿಗಳು ನಡೆಯಬೇಕಿದೆ. ಗ್ರೇಟ–ರ್ ಬೆಂಗಳೂರು ಮಹಾನಗರ ಪಾಲಿಕೆಗಳಿಗೆ ಚುನಾವಣೆ ನಡೆದು ಸದಸ್ಯರು ಆಯ್ಕೆಯಾದರೆ, ಸ್ಥಳೀಯ ಆಡಳಿತಕ್ಕೆ ಒತ್ತು ನೀಡಬೇಕಿದೆ. ಸಚಿವರ ಕಾರ್ಯಭಾರ ಕಡಿಮೆಯಾಗಲಿದೆ.

ಬಿಡಿಎ, ಬಿಎಂಆರ್‌ಡಿಗೆ ಪಾಲಿಕೆ ಸದಸ್ಯರ ಹಸ್ತಕ್ಷೇಪ ಮಾಡಲು ಅವಕಾಶ ಇಲ್ಲ. ಹೀಗಾಗಿ ಸಚಿವ ಕೃಷ್ಣ ಬೈರೇಗೌಡ ಈವರೆಗೂ ಖಾತೆಯ ಜವಾಬ್ದಾರಿ ವಹಿಸಿಕೊಳ್ಳದೇ ಗೊಂದಲದ್ದಲಿದ್ದಾರೆ. ಈವರೆಗೂ ತಾವು ನಿರ್ವಹಿಸಿದ ಕಂದಾಯ ಇಲಾಖೆಯಲ್ಲಿ ಉತ್ತಮ ಕೆಲಸ ಮಾಡಲು ಸಹಕರಿಸಿದ ಎಲ್ಲರಿಗೂ ಧನ್ಯವಾದ ಹೇಳಿದ್ದಾರೆ. ಹೊಸ ಖಾತೆಯ ಬಗ್ಗೆ ಚಕಾರ ಎತ್ತದೆ ಇರುವುದು ಹಲವು ಅನುಮಾನಗಳನ್ನು ಮೂಡಿಸಿದೆ.

# ಮಾನ್ಸೂನ್ ಆರಂಭದ ಹಿನ್ನಲೆ ಸೊಳ್ಳೆ ಉತ್ಪತ್ತಿ ತಾಣಗಳ ನಿರ್ಮೂಲನೆಗೆ ಸಾರ್ವಜನಿಕರಿಗೆ ಜಾಗೃತಿ ನೀಡಿ ಡೆಂಗ್ಯು ಮುಂತಾದ ರೋಗ ಹರಡದಂತೆ ತಡೆಯಿರಿ.

❑ ನೈಜ್ಯ ದೆಸೆ ನ್ಯೂಸ್

**ಮಾನ್ಸೂನ್ ಮಳೆಯ ಅರಂಭದ ಹಿನ್ನಲೆ ಮನೆಯ ಸುತ್ತಲೂ ಹಾಗೂ ಅನಗತ್ಯ ನೀರು ನಿಲ್ಲುವ ಸ್ಥಳಗಳಲ್ಲಿ ಸೊಳ್ಳೆ ಉತ್ಪತ್ತಿಯಾಗುವುದನ್ನು ತಡೆಗಟ್ಟುವ ಕುರಿತು ಸಾರ್ವಜನಿಕರ ಸಹಕಾರ ಹಾಗೂ ನಿಯಮಿತವಾಗಿ ನಿಗಾವಣೆ ವಹಿಸುವಂತೆ ಮಹಾನಗರಪಾಲಿಕೆಯ ಉಪ ಆಯುಕ್ತರು ( ಆಡಳಿತ ) ಡಾ ಶರಣಪ್ಪ ವಿವಿಧ ಇಲಾಖೆಯ ಅಧಿಕಾರಿಗಳಿಗೆ ತಿಳಿಸಿದರು.**



ಜಿಲ್ಲಾ ಅರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಮಹಾನಗರ ಪಾಲಿಕೆ ಹಾಗೂ ಎನ್‌ವಿಬಿಡಿಸಿಪಿ ನಗರ ಡೆಂಗ್ಯು ಟಾಸ್ಕ್ ಫೋರ್ಸ್ ಸಮಿತಿ ಸಭೆಯ ನೇತೃತ್ವ ವಹಿಸಿ ಮಾತನಾಡುತ್ತಾ, ಕರ್ನಾಟಕ ರಾಜ್ಯ ಸರಕಾರದ ಮಾರ್ಗಸೂಚಿಂ–ಯನ್ವಯ ಹಾಗೂ ಆಯುಕ್ತರ ನಿರ್ದೇಶನದಂತೆ ಅರೋಗ್ಯ ಇಲಾಖೆಯಿಂದ ಶಂಕೀತ ಡೆಂಗ್ಯು ಪ್ರಕರಣದ ಮಾಹಿತಿ ದೊರೆತಾಗ ತಕ್ಷಣವೇ ಫಾಗಿಂಗ್ ಕೈಗೊಳ್ಳಲಾಗುತ್ತಿದೆ, ಚರಂಡಿ ಶುಚಿಗೊಳಿಸುವ ಕಾರ್ಯ ನಿರಂತರವಾಗಿದ್ದು, ಶಾಲೆ, ಅಂಗನವಾಡಿಗಳ ವ್ಯಾಪ್ತಿಯಲ್ಲಿ ನೀರು ನಿಲ್ಲದಂತೆ ನಿಗಾವಹಿಸಲು ತಿಳಿಸಿದರು.

ಸೊಳ್ಳೆಯ ಉತ್ಪತ್ತಿ ತಾಣ ಕಂಡು ಬಂದರೆ ದಂಡ: ಸೊಳ್ಳೆ ಉತ್ಪತ್ತಿ ತಡೆಯಲು ಕರ್ನಾಟಕ ಸರಕಾರವು ಜಾಗೃತಿಯ ಜೊತೆಜೊತೆಗೆ ನಿರ್ಲಕ್ಷ್ಯ ವಹಿಸುವುದನ್ನು ತಡೆಯಲು ದಂಡ ವಿಧಿಸಲು ಸೂಚಿಸಿದೆ. ಮನೆಗಳಿಗೆ ಗ್ರಾಮೀಣ ಭಾಗದಲ್ಲಿ ರೂ 400/– ನಗರ ಪ್ರದೇಶಗಳಲ್ಲಿ ರೂ 800/– ವಾಣಿಜ್ಯ ಮಳಿಗೆ ಗ್ರಾಮೀಣ ಭಾಗದಲ್ಲಿ ರೂ 1000/– ನಗರ ಪ್ರದೇಶಗಳಲ್ಲಿ ರೂ 2000/– ಕಟ್ಟಡ ನಿರ್ಮಾಣ, ಗ್ರಾಮೀಣ ಭಾಗದಲ್ಲಿ ರೂ 2000/– ನಗರ ಪ್ರದೇಶಗಳಲ್ಲಿ ರೂ 4000/– ದಂಡ ವಿಧಿಸಬಹುದಾಗಿದ್ದು, ಸಾರ್ವಜನಿಕರು, ವ್ಯಾಪ್ಯಾರಸ್ಥರು, ಕೈಗಾರಿಕೋದ್ಯಮಿಗಳಿಗೆ ಈ ಕುರಿತು ಜಾಗೃತಿ ನೀಡಿ ಪದೆ–ಪದೆ ನಿರ್ಲಕ್ಷ್ಯ ವಹಿಸಿದರೆ ನಿಯಮಾನುಸಾರ ದಂಡ ವಿಧಿಸೋಣವೆಂದು ತಿಳಿಸಿದರು.

ತಹಶಿಲ್ದಾರ ಸುರೇಶ ವರ್ಮಾ ಮಾತನಾಡಿ ನಗರ ಪ್ರದೇಶದಂತೆ ರಾಯಚೂರು ಗ್ರಾಮೀಣ ಪ್ರದೇಶದಲ್ಲಿ ಸಹ ಜನತೆಯ ಸಹಕಾರದಿಂದ ಪ್ರತಿ ಶುಕ್ರವಾರ ಲಾರ್ವಾ ಸಮೀಕ್ಷೆಯನ್ನು ಬಲಪಡಿಸಿ ಕೇವಲ ನೀರು ಸಂಗ್ರಹಕ ಪರಿಕರಗಳಲ್ಲದೆ ಹೂವಿನ ಕುಂಡಲ, ಫ್ರಿಜ್‌ನ ಹಿಂಭಾಗ, ಎರ್ ಕೂಲರ್, ಮುಂತಾದವುಗಳ ಪರಿಶೀಲಿಸಿ, ಸ್ವಚ್ಚಗೊಳಿಸಲು ಹಾಗೂ ಕನಿಷ್ಠ ವಾರಕ್ಕೊಮ್ಮೆ ಎಲ್ಲ ನೀರಿನ ಪರಿಕರಗಳನ್ನು ಚೆನ್ನಾಗಿ ತಿಕ್ಕಿ ತೊಳೆದು ಮುಚ್ಚಳ ಮುಚ್ಚುವ ರೂಡಿ ಅಳವಡಿಸಿಕೊಳ್ಳಲು ಸಮುದಾಯದ ಸಹಕಾರ ನಿರಂತರವಾಗಿ ಜಾಗೃತಿ ಮುಂದುವರೆಸಲು ತಿಳಿಸಿದರು.

ಜಿಲ್ಲಾ ರೋಗವಾಹಕ ಆಶ್ರಿತ ರೋಗಗಳ ನಿಯಂತ್ರಣಾಧಿಕಾರಿ ಡಾ ಚಂದ್ರಶೇಖರಯ್ಯ ಸ್ವಾಮಿ ಮಾಹಿತಿ ನೀಡುತ್ತಾ, ಡೆಂಗ್ಯು ಪ್ರಕರಣಗಳ ಸಂಖ್ಯೆ ಗಣನೀಯವಾಗಿ ನಿಯಂತ್ರಣಗೊಂಡಿದ್ದು, ಬಳಕೆಗಾಗಿ ನೀರು ತುಂಬುವ ಡ್ರಮ್, ಬ್ಯಾರೇಲ್, ಸಿಮೆಂಟ್ ತೊಟ್ಟಿ, ಕಲ್ಲಿನ ಡೋಣಿ, ಕೊಡ, ಮುಂತಾದ ಪರಿಕರಗಳಿಗೆ ಅನುಸರಿಸುವ ಜೊತೆಗೆ ಮನೆಯ ಸುತ್ತಲೂ ನೀರು ನಿಲ್ಲಬಹುದಾದ ಘನ ತ್ಯಾಜ್ಯ ವಸ್ತುಗಳಾದ, ತೆಂಗಿನ ಚಿಪ್ಪು, ಒಡೆದ ಬಕೆಟ್, ಕೊಡ, ಹಳೆಯ ಟೈರು, ಟಿನ್ ಸೇರಿದಂತೆ ಇತರೆ ವಸ್ತುಗಳನ್ನು ತೆರವುಗೊಳಿಸುವ ರೂಡಿ ಹಾಕಿಕೊಳ್ಳಲು ಹಾಗೂ ಯಾವುದೇ ಪರಿಕರಗಳಲ್ಲಿ ಸೊಳ್ಳೆ ಮರಿ (ಬಾಲದ ಹುಳು ) ಕಂಡುಬಂದಲ್ಲಿ ತಕ್ಷಣ ಸ್ವಚ್ಚಗೊಳಿಸಿ, ನೀರು ತುಂಬಿದ ನಂತರ ಸರಿಯಾಗಿ ಮುಚ್ಚಳ ಮುಚ್ಚುವಂತೆ ಆರೋಗ್ಯ ಶಿಕ್ಷಣ ನೀಡಲಾಗುತ್ತಿದೆ ಎಂದರು. ಅಲ್ಲದೆ ಡೆಂಗ್ಯು ಹರಡುವ ಈಡಿಸ್ ಇಜಿಪ್ಟೈ ಸೊಳ್ಳೆ ಶುದ್ಧ ನೀರಿನಲ್ಲಿ ಸಂತತಿ ವೃದ್ದಿ ಮಾಡುವುದರಿಂದ ಮತ್ತು ಹಗಲು ಹೊತ್ತಿನಲ್ಲಯೇ ಕಚ್ಚುವುದರಿಂದ ಮನೆಯ ಒಳ ಹಾಗೂ ಹೊರ ಆವರಣದಲ್ಲಿ ನೀರು ನಿಲ್ಲದಂತೆ ನಿಗಾ ವಹಿಸಲು, ಮುಖ್ಯವಾಗಿ ಡೆಂಗ್ಯು ರೋಗಕ್ಕೆ ನೇರವಾದ ಚಿಕಿತ್ಸೆ ಇಲ್ಲ, ಲಕ್ಷಣಗಳಾಧರಿಸಿ ಚಿಕಿತ್ಸೆ ನೀಡಲಾಗುವುದು. ನಿರ್ಲಕ್ಷ್ಯಿಸಿದರೆ ಗಂಭೀರ ಆರೋಗ್ಯ ಸಮಸ್ಯೆ ಉಂಟಾಗುವ ಸಾಧ್ಯತೆಗಳು ಇರುವುದರಿಂದ ಚಿಕ್ಕ ಮಕ್ಕಳು, ವಯೊವೃದ್ದರು, ಗರ್ಭಿಣಿ, ಬಾಣಂತಿಯರ ಆರೋಗ್ಯದ ಸುರಕ್ಷತೆ ವಹಿಸಲು ಸೂಚಿಸಿ ಮಲಗುವಾಗ ಸೊಳ್ಳೆ ಪರದೆ, ಕಿಡಕಿಗಳಿಗೆ ಜಾಲರಿ ಅಳವಡಿಕೆ ಸೊಳ್ಳೆ ಬತ್ತಿ ಬಳಕೆ, ಹಾಗೂ ಶಾಸ್ವತ ನೀರು ನೀಲ್ಲುವ ಸ್ಥಳಗಳಿದ್ದಲ್ಲಿ ಲಾರ್ವಾಹಾರಿ ಗಪ್ಪಿ ಹಾಗೂ ಗಂಬೋಷಿಯಾ ಮೀನು ಬಿಡುವುದರ ಸದುಪಯೋಗಕ್ಕೆ ಹೆಚ್ಚು ಜಾಗೃತಿ ನೀಡಲಾಗುತ್ತಿದೆ ಎಂದು ತಿಳಿಸಿದರು.

ಈ ಸಂದರ್ಭದಲ್ಲಿ ಜಿಲ್ಲಾ ಕ್ಷಯರೋಗ ನಿರ್ಮೂಲನಾ ಅಧಿಕಾರಿ ಹಾಗೂ ಪಾಲಿಕೆಯ ಅರೋಗ್ಯ ಅಧಿಕಾರಿ ಡಾ ಮಹಮ್ಮದ್ ಶಾಕೀರ್, ತಾಲೂಕಾ ಆರೋಗ್ಯಾಧಿಕಾರಿ ಡಾ ಅಮೃತ ಹುಕ್ಕೇರಿ, ಪರಿಸರ ಅಭಿಯಂತರರು ಜಯಪಾಲರೆಡ್ಡಿ, ಆಯುಷ್ ಇಲಾಖೆಯ ಡಾ ಪೂಜಾ, ಜಿಲ್ಲಾ ಅರೋಗ್ಯ ಶಿಕ್ಷಣಾಧಿಕಾರಿ ಈಶ್ವರ ಹೆಚ್ ದಾಸಪ್ಪನವರ, ಶಿಕ್ಷಣ ಇಲಾಖೆಯ ಟಿಪಿಓ ಭಾಸ್ಕರ್ ಕುಮಾರ್, ಡಿವೈಹೆಚ್‌ಇಓ ಬಸಯ್ಯ, ಐಸಿಡಿಎಸ್‌ನ ಚನ್ನಮ್ಮ, ಆರ್‌ಟಿಓ ಕಛೇರಿಯ ಅರ್ಜುನ ಚೌವ್ಹಾಣ್, ಬಿಸಿಎಮ್ ಇಲಾಖೆಯ ಈರಣ್ಣ ಪತ್ತಾರ, ಹಿರಿಯ ಹೆಚ್‌ಐಓ ಸುರೇಶ, ಬಿಹೆಚ್‌ಇಓ ಸರೋಜಾ ಕೆ, ಹಿರಿಯ ಪಿಹೆಚ್‌ಸಿಓ ಈರಮ್ಮ, ಪಾಲಿಕೆ ನೈರ್ಮಲ್ಯ ನೀರಿಕ್ಷಕರಾದ ತಿಕ್ಕಾರೆಡ್ಡಿ, ರಾಮಚಂದ್ರ, ಆಕಾಶ ಪಾಟೀಲ್, ನಂದಿನಿ ಕಾಲೇಜಿನ ಎಸ್ ರೇಹಾನ್, ಎಮ್‌ಟಿಎಸ್ ಸಂಧ್ಯಾ, ಹಾಗೂ ಆರ್‌ಸಿಹೆಚ್ ವಿಭಾಗದ ರವಿ, ನರೇಶ್ ಸೇರಿದಂತೆ ಇತರರು ಉಪಸ್ಥಿತರಿದ್ದರು.

OWNER, PUBLISHER, PRINTER BY IRFAN K H NO. 3/117, BALAGANUR, SINDHANOOR, RAICHUR-584138 KARNATAKA AND PRINTED AT SHIVANI PRINTERS, HULKOTI, NEW COURT, OPPOSITE PLOT NO. 28 RS NO. 312/3B, GARAG COMPLEX, GADAG-582101